ಸಂಪುಟ 01 । ಸಂಚಿಕೆ 159 । ಶನಿವಾರ 02 ಮೇ 2026 । ಪುಟ 4 । ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

MA ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

REGIONAL KANNADA DAILY MORNING

ಸಿಂಧನೂರು, ಮಸ್ಕಿ ಮಾನ್ವಿ, ಅಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

RNI code: KNKAN/25/A3581 ಮೋ: 9902277588, 9880707586, 9008787586 naijyadese@gmail.com

## ಈ ದಿನದ ವಿಶೇಷ

**1) ನಾರದ ಜಯಂತಿ**

ನಾರದ ಜಯಂತಿಯನ್ನು ಶನಿವಾರ, ಮೇ 2, 2026 ರಂದು ಆಚರಿಸಲಾಗುತ್ತದೆ. ಈ ಪವಿತ್ರ ದಿನವು ಪ್ರಾರ್ಥನೆ, ಪಠಣ ಮತ್ತು ದೈವಿಕ ಬುದ್ಧಿವಂತಿಕೆಯ ಬಗ್ಗೆ ಆಳವಾದ ಚಿಂತನೆಯ ಸಮಯವಾಗಿದೆ. ಭಕ್ತರು ನಾರದ ಮುನಿಯನ್ನು ವಿಷ್ಣು ಮಂತ್ರಗಳನ್ನು ಪಠಿಸುವ ಮೂಲಕ, ಧರ್ಮಗ್ರಂಥ-'ಗಳನ್ನು ಅಧ್ಯಯನ ಮಾಡುವ ಮೂಲಕ ಮತ್ತು ಆಧ್ಯಾತ್ಮಿಕ ಜ್ಞಾನೋದಯದ ಚರ್ಚೆಗಳಲ್ಲಿ ತೊಡಗಿಸಿಕೊಳ್ಳುವ ಮೂಲಕ ಗೌರವಿಸುತ್ತಾರೆ.

**2) ಗುಜರಾತ್ ದಿನ**

ಗುಜರಾತ್‌ನಲ್ಲಿ ಇಂದು ಸರ್ಕಾರಿ ರಜಾದಿನವಾಗಿದೆ. ಗುಜರಾತ್ ರಾಜ್ಯವು 1 ಮೇ 1960 ರಂದು ರಚನೆಯಾಯಿತು.

**3) ವಿಶ್ವ ಟ್ಯೂನ ದಿನ**

ಇದನ್ನು ಮೇ 2 ರಂದು ಆಚರಿಸಲಾಗುತ್ತದೆ ಮತ್ತು ಟ್ಯೂನ ಮೀನಿನ ಮಹತ್ವದ ಬಗ್ಗೆ ಜಾಗೃತಿ ಮೂಡಿಸಲು ವಿಶ್ವಸಂಸ್ಥೆ (ಗಒ) ಇದನ್ನು ಸ್ಥಾಪಿಸಿದೆ.

## ಸುಭಾಷಿತ

ಅಪಮಾನ ಸಹಿಸುವುದು ಕಷ್ಟವಲ್ಲ; ಆದರೆ, ಅದನ್ನು ಸಹಿಸಿಕೊಳ್ಳುವುದು ಅನ್ಯಾಯ.

-ರವೀಂದ್ರನಾಥ ಟ್ಯಾಗೋರ್

ನೈಜ್ಯ ದೆಸೆ ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಸಚಿವ ದ್ವಯರಿಗೆ ಚಕ್ಕಡಿಯಲ್ಲಿ ಮೆರವಣಿಗೆ, ತುಲಾಭಾರ

## ಸಚಿವ ಎಂ.ಬಿ. ಪಾಟೀಲ, ಭೋಸರಾಜುಗೆ ಗ್ರಾಮಸ್ಥರಿಂದ ಅದ್ದೂರಿ ಸನ್ಮಾನ

**ವಿಜಯಪುರ: ಜಿಲ್ಲೆಯ ಅನ್ನದಾತರ ಆಶೋತ್ತರಗಳಿಗೆ ಸ್ಪಂದಿಸಿ, ಜಲ ಸಂಪನ್ಮೂಲಗಳ ಪುನಶ್ಚೇತನಕ್ಕೆ ಬದ್ಧತೆ ತೋರಿದ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಂ.ಬಿ. ಪಾಟೀಲ ಹಾಗೂ ಸಣ್ಣ ನೀರಾವರಿ ಸಚಿವರಾದ ಎನ್.ಎಸ್.ಭೋಸರಾಜು ಜಿ ಅವರಿಗೆ ಲೋಹಗಾಂವ ಗ್ರಾಮಸ್ಥರು ಎತ್ತಿನ ಬಂಡಿಯಲ್ಲಿ ತುಲಾಭಾರ ಮಾಡುವ ಮೂಲಕ ತಮ್ಮ ಅಪಾರ ಅಭಿಮಾನ ಹಾಗೂ ಕೃತಜ್ಞತೆ ಸಲ್ಲಿಸಿದರು.**

ಶುಕ್ರವಾರ ಸಣ್ಣ ನೀರಾವರಿ ಇಲಾಖೆಯಿಂದ ವಿವಿಧ ಗ್ರಾಮಗಳಲ್ಲಿ ಕೋಟ್ಯಂತರ ರೂಪಾಯಿ ವೆಚ್ಚದ ಸರಣಿ ಬಾಂದಾರ ನಿರ್ಮಾಣ ಕಾಮಗಾರಿಗಳಿಗೆ ಚಾಲನೆ ನೀಡಿದ ಸಂದರ್ಭದಲ್ಲಿ ರೈತರು ಭಾವನಾತ್ಮಕವಾಗಿ ಸಚಿವ ದ್ವಯರನ್ನು ಸನ್ಮಾನಿಸಿ, ಸಂಭ್ರಮಿಸಿದರು. 17 ಕೋಟಿಗೂ ಅಧಿಕ ವೆಚ್ಚದ ಕಾಮಗಾರಿಗಳಿಗೆ ಚಾಲನೆ ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್. ಎಸ್. ಬೋಸರಾಜು ಅವರೊಂದಿಗೆ ಸಚಿವರು ಜಿಲ್ಲೆಯ ವಿವಿಧೆಡೆ ಅಭಿವೃದ್ಧಿ ಕೆಲಸಗಳಿಗೆ ಶಂಕುಸ್ಥಾಪನೆ ನೆರವೇರಿಸುವ ಮೂಲಕ ರೈತರ ಸಂತಸದ ಹೊನಲನ್ನು ಇಮ್ಮಡಿಗೊಳಿಸಿದರು.

ಬರಟಗಿ ಗ್ರಾಮದಲ್ಲಿ 734 ಲಕ್ಷ ರೂ. ವೆಚ್ಚದಲ್ಲಿ ಅರಕೇರಿ, ಬರಟಗಿ ಮತ್ತು ಹಂಚಿನಾಳ ಪಿ.ಎಚ್ ಗ್ರಾಮಗಳ ಅಭಿವೃದ್ಧಿ ಕಾಮಗಾರಿಗೆ ಚಾಲನೆ ಕೊಡಿಸಿದರು. ಲೋಹಗಾಂವ: 978 ಲಕ್ಷ ರೂ. ವೆಚ್ಚದಲ್ಲಿ ಲೋಹಗಾಂವ, ಟಕ್ಕಳಕಿ, ಹುಬನೂರ, ಜಾಲಗೇರಿ, ಇಟ್ಟಂಗಿಹಾಳ ಹಾಗೂ ಸಿದ್ಧಾಪೂರ ಗ್ರಾಮಗಳಲ್ಲಿ ಸರಣಿ ಬಾಂದಾರಗಳ ನಿರ್ಮಾಣ ಕಾರ್ಯಕ್ಕೆ ಚಾಲನೆ ಕೊಡಿಸಿದ್ದು, ಈ ಗ್ರಾಮಸ್ಥರಲ್ಲಿ ಹರ್ಷವನ್ನುಂಟು ಮಾಡಿತು. ಅಂತರ್ಜಲ ವೃದ್ಧಿ: ರೈತರ ಮೊಗದಲ್ಲಿ ಮಂದಹಾಸ ಕಾರ್ಯಕ್ರಮದಲ್ಲಿ ಮಾತನಾಡಿದ ಸಚಿವರು, ಸರಣಿ ಬಾಂದಾರಗಳ ನಿರ್ಮಾಣದಿಂದ ಈ ಭಾಗದ ಅಂತರ್ಜಲ ಮಟ್ಟ ಗಣನೀಯವಾಗಿ ಹೆಚ್ಚಲಿದೆ. ಇದರಿಂದ ಹಳ್ಳ-ಕೊಳ್ಳಗಳು ತುಂಬಿ ತುಳಕುತ್ತವೆ. ಬಾವಿ ಮತ್ತು ಕೊಳವೆ ಬಾವಿಗಳಲ್ಲಿ



ನೀರಿನ ಲಭ್ಯತೆ ಸುಧಾರಿಸಿ ರೈತರಿಗೆ ಕೃಷಿ ಚಟುವಟಿಕೆಗಳಿಗೆ ಅನುಕೂಲವಾಗಲಿದೆ ಎಂದರು.

ಕೇವಲ ಕೃಷಿಯಷ್ಟೇ ಅಲ್ಲದೆ, ಬೇಸಿಗೆಯ ಕಠಿಣ ಸಮಯದಲ್ಲಿ ಪಶು- ಪಕ್ಷಿಗಳಿಗೂ ಕುಡಿಯುವ ನೀರು ಸಿಗುವಂತೆ ಮಾಡುವುದು ನಮ್ಮ ಮುಖ್ಯ ಉದ್ದೇಶವಾಗಿದೆ ಎಂದು ಸಚಿವರು ತಿಳಿಸಿದರು. ಎತ್ತಿನ ಬಂಡಿಯಲ್ಲಿ ಮೆರವಣಿಗೆ, ತುಲಾಭಾರ ತಮ್ಮ ಜಮೀನುಗಳಿಗೆ ನೀರು ಒದಗಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತಿರುವ ಜಿಲ್ಲಾ ಉಸ್ತುವಾರಿ ಸಚಿವರಿಗೆ ಲೋಹಗಾಂವ ಗ್ರಾಮದ ರೈತರು ಹಾಗೂ ಗ್ರಾಮಸ್ಥರು ವಿಶಿಷ್ಟವಾಗಿ ಕೃತಜ್ಞತೆ ಸಲ್ಲಿಸಿದರು. ಜೋಡೆತ್ತಿನ ಚಕ್ಕಡಿಯಲ್ಲಿ ಸಚಿವ ದ್ವಯರನ್ನು ಕೂಡಿಸಿ 'ಚಕ್ಕಡಿಯಲ್ಲಿ ಮೆರವಣಿಗೆ ಮಾಡಿ, ಕೃತಜ್ಞತೆ ಸಲ್ಲಿಸಿದರು.

ಗ್ರಾಮದ ಹಳ್ಳದ ಹತ್ತಿರ ಭೂಮಿ ಪೂಜೆ ನೆರವೇರಿಸಿದ ನಂತರ ಶೃಂಗರಿಸಿದ ಜೋಡೆತ್ತಿನ ಬಂಡಿಯಲ್ಲಿ ಸಚಿವದ್ವಯರನ್ನು ಭವ್ಯ ಮೆರವಣಿಗೆ ಮೂಲಕ ವೇದಿಕೆ ಕಾರ್ಯಕ್ರಮ ಸ್ಥಳಕ್ಕೆ ಬರಮಾಡಿಕೊಳ್ಳಲಾಯಿತು. ವೇದಿಕೆಯ ಆವರಣದಲ್ಲಿ ಐದಾರು ಜೆಸಿಬಿ ಮೂಲಕ ಸಚಿವರಿಗೆ ಹೂಮಾಲೆ ಹಾಕುವ ಮೂಲಕ ತಮ್ಮ ಅಭಿಮಾನ ಮೆರೆದರು. ವೇದಿಕೆಯಲ್ಲಿದ್ದ ಸಚಿವರಿಬ್ಬರಿಗೆ ಪೇಟ ಸುತ್ತಿ, ಒಣದ್ರಾಕ್ಷಿ ಹಾರ ಹಾಗೂ ಬೆಳ್ಳಿಮೂರ್ತಿ ನೀಡುವ ಮೂಲಕ ಗ್ರಾಮಸ್ಥರು ಸನ್ಮಾನಿಸಿದರು.

ನಮಗೆ ನೀರು ಕೊಟ್ಟು ಬದುಕು ಸದೃಢಗೊಳಿಸಿದ ಸಚಿವರಿಗೆ ನಾವು ಸಲ್ಲಿಸುತ್ತಿರುವ ಸಣ್ಣ ಗೌರವವಿದು" ಎಂದು ಲೋಹಗಾಂವ ರೈತ ಮುಖಂಡರು ಈ ಸಂದರ್ಭದಲ್ಲಿ ಹರ್ಷ ವ್ಯಕ್ತಪಡಿಸಿದರು.

ವಿಶೇಷ ತುಲಾಭಾರ ಸಚಿವದ್ವಯರಾದ ಎನ್.ಎಸ್. ಭೋಸರಾಜು ಹಾಗೂ ಡಾ.ಎಂ.ಬಿ.ಪಾಟೀಲ ಅವರನ್ನು ಗ್ರಾಮಸ್ಥರ ಪರವಾಗಿ ರೈತರು ತಾವು ಬೆಳೆದ ಹಣ್ಣು ಹಂಪಲುಗಳಿಂದ ತುಲಾಭಾರ ಮಾಡಿದ್ದು ವಿಶೇಷವಾಗಿ ಗಮನಸೆಳೆಯಿತು. ಸಚಿವ ಎಂ.ಬಿ. ಪಾಟೀಲರಿಗೆ ಅವರೇ ಸಾಟಿ ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್. ಬೋಸರಾಜು ಮಾತನಾಡಿ, ವಿಜಯಪುರ ಜಿಲ್ಲಾ ಉಸ್ತುವಾರಿ ಸಚಿವರಾದ ಎಂ.ಬಿ. ಪಾಟೀಲರು ಲೋಕಸಭಾ ಸದಸ್ಯರಾಗಿ, ಸಚಿವರಾಗಿ ಈ ಭಾಗದ ಅಭಿವೃದ್ಧಿ ಬಗ್ಗೆ ಜನರ ಬಗ್ಗೆ ಅಪಾರ ಕಾಳಜಿವಹಿಸಿದ್ದಾರೆ ಎಂದು ಬಣ್ಣಿಸಿದರು.

ಕೆರೆ ತುಂಬಿಸಲು ಈ ಭಾಗದ ಜನ-ರಿಗೆ ಅನೇಕ ನ್ಯಾಯಾಂಗ ಸಮಸ್ಯೆಗಳಿದ್ದರೂ, ಅವುಗಳನ್ನೆಲ್ಲ ನಿವಾರಿಸುವ ಮೂಲಕ ಲಕ್ಷಾಂತರ ಹೆಕ್ಟೇರ್ ಭೂಮಿಗೆ ನೀರು ಹರಿಸಿದ ಅವರ ಪ್ರಯತ್ನಕ್ಕೆ ಅವರೇ ಸಾಟಿಯಾಗಿದ್ದಾರೆ ಎಂದು ಗುಣಗಾನ ಮಾಡಿದರು. ಆಲಮಟ್ಟಿ ಡ್ಯಾಂ ಎತ್ತರ ಹೆಚ್ಚಿಸುವುದರಿಂದ ಈ ಭಾಗದ ರೈತರಿಗೆ ಇನ್ನಷ್ಟೂ ಅನುಕೂಲವಾಗಲಿದೆ. ಸಣ್ಣನೀರಾವರಿ ಇಲಾಖೆಯು ಅಂತರ್ಜಲ



ಹೆಚ್ಚಿಸುವಲ್ಲಿ ಒಂಭತ್ತನೆ ಸ್ಥಾನದಲ್ಲಿದ್ದೇವೆ.

ಬೇರೆ ಭಾಗದಲ್ಲಿ 400 ಅಡಿ ಬೋರ್ ಹೊಡೆದರೂ, ನೀರು ಬರಲ್ಲ. ಆದ-'ರೆ ಈ ಭಾಗದಲ್ಲಿ ಅಂತರ್ಜಲ ಹೆಚ್ಚಳದಿಂದ ವಿಜಯಪುರ ಜಿಲ್ಲೆ ಈಗ ಇಡೀ ರಾಜ್ಯ ಹಾಗೂ ದೇಶಕ್ಕೆ ಮಾದರಿಯಾಗಿದೆ. ಈ ಕಾರ್ಯದ ಶ್ರೇಯಸ್ಸು ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ. ಪಾಟೀಲ ಅವರಿಗೆ ಸಲ್ಲಬೇಕು ಎಂದರು. 10 ಪ್ಯಾಕೇಜ್ ನಲ್ಲಿ ಬಾಂದಾರ ನಿರ್ಮಾಣ ಮಾದರಿ 6 ಪ್ಯಾಕೇಜ್ ನಿರ್ಮಾಣ-ಕ್ಕಾಗಿ ಜಿಲ್ಲೆಯಲ್ಲಿ ಕಂಕಣಬದ್ಧರಾಗಿ ಸಚಿವರು ಕಾರ್ಯ ನಿರ್ವಹಿಸುತ್ತಿದ್ದಾರೆ ಎಂದರು. ಸಚಿವರ ಈ ಮಾದರಿ ಕಾರ್ಯವನ್ನು ನಾನು ತೆಗೆದುಕೊಂಡು ರಾಜ್ಯಕ್ಕೆ ವಿಸ್ತ-ರಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುವುದಾಗಿ ಸಚಿವ ಭೋಸರಾಜು ತಿಳಿಸಿದರು.

ಈ ಯೋಜನೆಗೆ ಸರ್ಕಾರದಲ್ಲಿ ಹಂತ ಹಂತವಾಗಿ ಅನುಮೋದನೆ ನೀಡುವ ಮೂಲಕ ಜನಪರ ಕಾರ್ಯ ಮಾಡುತ್ತಿದ್ದಾರೆ. ಸಚಿವರು ಮಾಡುವ ಕೆಲಸ ಸದಾ ಕಾಲ ನೆನಪಿಡುವಂತಿವೆ ಎಂದರು. ಎಂ.ಬಿ.ಪಾಟೀಲ ಅವರ ಪ್ರಯತ್ನದ ಫಲವಾಗಿ ನೀರಾವರಿ ಸೌಲಭ್ಯ ಕಂಡಿರುವ ಈ ಭಾಗದಲ್ಲಿ ಭೂಮಿ ಬೆಲೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ನೀರು ಮತ್ತು ವಿದ್ಯುತ್ ನೀಡುವ ಮೂಲಕ ಕೈಗಾರಿಕಾ ಸಚಿವರಾಗಿ ಮಾದರಿ ಕಾರ್ಯ ಮಾಡಿದ್ದಾರೆ ಎಂದು ಬಣ್ಣಿಸಿದರು. ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಸಂಬಂಧಿಸಿದಂತೆ ಅವರ ಕಾಳಜಿ ಅಪಾರವಾಗಿದೆ. ಕೈಗಾಗ-ರಿಕೆಗಳನ್ನು ರಾಜ್ಯಕ್ಕೆ ತರಲು ಪ್ರಯತ್ನಿಸುತ್ತಿದ್ದಾರೆ. ಜನಪರ ಹಾಗೂ ಜನಸ್ನೇಹಿಯಾಗಿ

2ನೇ ಪುಟಕ್ಕೆ

# ಕೆಂಭಾವಿಯಲ್ಲಿ ಬುದ್ಧ ಜಯಂತಿ ಅದ್ದೂರಿ ಆಚರಣೆ

ನೈಜ್ಯ ದೆಸೆ ನ್ಯೂಸ್

**ಯಾದಗಿರಿ: ಜಿಲ್ಲೆಯ ಸುರಪುರ ತಾಲೂಕಿನ ಕೆಂಭಾವಿ ಗ್ರಾಮದಲ್ಲಿ 2570 ನೇ ಬುದ್ಧ ಜಯಂತಿಯನ್ನು ವಿಜೃಂಭಣೆಯಿಂದ ಆಚ-ರಿಸಲಾಯಿತು.**

**ಈ ಸಂದರ್ಭದಲ್ಲಿ ಶಿವಪ್ಪ ಕಂಬಾರ ಮಾತನಾಡಿ. ಬುದ್ಧರು ಮತ್ತು ಬಸವಣ್ಣನವರು ಹಾಗೂ ಬಾಬಾ ಸಾಹೇಬ್ ಅಂಬೇಡ್ಕರ್ ಅವರು ನಡೆದುಬಂದ ಹಾದಿಯಲ್ಲಿ ನಾವು ನೀವು ನಡೆಯೋಣ.**



ನಾವು ಪರರಿಗೆ ಒಳ್ಳೆಯ ಕೆಲಸ ಮಾಡಿದರೆ ನಮಗೆ ಪರ ವ್ಯಕ್ತಿಗಳು ಒಳ್ಳೆಯದು ಮಾಡುತ್ತಾರೆ ಎಂದು ಹೇಳಿದರು ಮತ್ತು ಶ್ರೀಬುದ್ಧರು ಯಾವ ರೀತಿ ಪ್ರೀತಿಯಿಂದ ನಡೆದುಕೊಂಡು ಬಂದಿದ್ದಾರೆ ಅದೇ ರೀತಿಯಿಂದ ನಾವೆಲ್ಲರೂ ನಡೆದುಕೊಂಡು ಹೋದರೆ ನಾವು ಬುದ್ದ ಹಾಗೂ ಬಸವಣ್ಣ ಮತ್ತು ಬಾಬಾ ಸಾಹೇಬರಿಗೆ ಗೌರವ ಸಲ್ಲಿಸಿದ ಹಾಗೆ ಆಗುತ್ತದೆ. ಬುದ್ಧರು ಹೇಗೆ ಶಾಂತಿ ರೀತಿಯಿಂದ ನಡೆದುಕೊಂಡರು ಅದೇ ರೀತಿ ನಾವು ನಡೆದುಕೊಳ್ಳೋಣ ಎಂದು ಈ ಸಂದರ್ಭದಲ್ಲಿ ಹೇಳಿದರು. ಇದೇ ಸಂದರ್ಭದಲ್ಲಿ. ಶ್ರೀ ಬುದ್ಧ ಅಭಿಮಾನಿಗಳು ಹಾಗೂ ಶ್ರೀ ಬಾಬಾ ಸಾಹೇಬ್ ಅಭಿಮಾನಿಗಳು ಹಾಗೂ ಶ್ರೀ ಬಸವಾದಿತತ್ವ ಶರಣ-ರ ಅಭಿಮಾನಿಗಳು ಪಾಲ್ಗೊಂಡಿದ್ದರು.

# ವಿಶ್ವ ಕಾರ್ಮಿಕ ದಿನ ವಿಶಿಷ್ಟ ರೀತಿಯಲ್ಲಿ ಆಚರಣೆ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಪಟ್ಟಣದ ನಿವೃತ್ತ ಶಿಕ್ಷಕ ಜಿ. ಎಸ್.ಜಮ್ಮಲದಿನ್ನಿ ದಂಪತಿಗಳು ತಮ್ಮ 40ನೇ ವಿವಾಹ ವಾರ್ಷಿಕೋತ್ಸವವನ್ನು ಅತ್ಯಂತ ವಿಶಿಷ್ಟ ರೀತಿಯಲ್ಲಿ ಆಚರಿಸಿದ್ದಾರೆ.**

ಶುಕ್ರವಾರ ವಿಶ್ವ ಕಾರ್ಮಿಕ ದಿನದಂದೇ ತಮ್ಮ 40ನೇ ವಿವಾಹ ವಾರ್ಷಿಕೋತ್ಸವ ಕೂಡಿ ಬಂದಿರುವುದರಿಂದ ಈ ಮಹತ್ವದ ದಿನವನ್ನು ವಿವಿಧ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವ ಕೃಷಿ ಕಾರ್ಮಿಕರು ಪೌರಕಾರ್ಮಿಕರು ಹಾಗೂ ಕೂಲಿ ಕಾರ್ಮಿಕರೊಂದಿಗೆ ವಿಶಿಷ್ಟ ರೀತಿಯಲ್ಲಿ ಆಚರಿಸುವುದರೊಂದಿಗೆ ಈ ಕ್ಷೇತ್ರದ



ಎಂಟು ಜನ ಕಾಯಕಯೋಗಿಗಳನ್ನು ಗೌರವಿಸಿ ಸನ್ಮಾನಿಸಿದ್ದಾರೆ. ತಮ್ಮ ವಿವಾಹ ವಾರ್ಷಿಕೋತ್ಸವವನ್ನು ಅತ್ಯಂತ ಅರ್ಥಪೂರ್ಣವಾಗಿ ಆಚರಿಸಿ ಜಮ್ಮಲದಿನ್ನಿಯವರು ಸಮಾಜದಲ್ಲಿ ಇತರರಿಗೂ ಮಾದರಿಯಾಗಿದ್ದಾರೆ. ಕಾರ್ಯಕ್ರಮದಲ್ಲಿ ಸನ್ಮಾನಿತಗೊಂಡಿರುವ ಕಾರ್ಮಿಕರು ಅವರ ವಾರ್ಷಿಕೋತ್ಸವಕ್ಕೆ ಶುಭ ಕೋರುವುದರೊಂದಿಗೆ ಅವರ ಆಯುಷ್ಯ ಆರೋಗ್ಯಕ್ಕಾಗಿ ಭಗವಂತನಲ್ಲಿ ಪ್ರಾರ್ಥಿಸಿದ್ದಾರೆ.

# ಗಡಿ ಭಾಗದ ಕನ್ನಡ ಶಾಲೆಗಳಲ್ಲಿ ಮೂಲಸೌಲಭ್ಯಗಳನ್ನು ಕಲ್ಪಿಸಲಾಗುವುದು: ಸೋಮಣ್ಣ ಬೇವಿನಮರದ

ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದ ಸಿದ್ದಲಿಂಗಪ್ಪ ವಕೀಲರ ನಿವಾಸಕ್ಕೆ ಆಗಮಿಸಿದ ರಾಜ್ಯ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಸೋಮಣ್ಣ ಬೇವಿನಮರದ ವೀರಶೈವ ಲಿಂಗಾಯತ ಸಮಾಜದವರಿಂದ ಸನ್ಮಾನ ಸ್ವೀಕರಿಸಿ ಮಾತನಾಡಿ ರಾಜ್ಯ ಸರ್ಕಾರವು 1910 ರಲ್ಲಿ ಗಡಿನಾಡ ಕನ್ನಡಿಗರ ಅಭಿವೃದ್ಧಿಗಾಗಿ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರವನ್ನು ರಚಿಸಿ ಕನ್ನಡ ಭಾಷಿಕರಿಗೆ ಅಗತ್ಯ ಮೂಲ ಸೌಕರ್ಯ,**

ಕನ್ನಡ ಶಾಲೆಗಳಲ್ಲಿ ಮೂಲಸೌಲಭ್ಯಗಳನ್ನು ನೀಡುವುದರ ಜೊತೆಗೆ ಕನ್ನಡ ಭಾಷಿಕರಿಗಾಗಿ ಕನ್ನಡ ಭವನಗಳನ್ನು ಕೂಡ ನಿರ್ಮಾಣ ಮಾಡಲಾಗಿದೆ ರಾಜ್ಯದ ಗಡಿಯನ್ನು ಹಂಚಿಕೊಂಡಿರುವ 6 ರಾಜ್ಯಗಳಲ್ಲಿನ 19 ಜಿಲ್ಲೆಯ 63 ತಾಲೂಕುಗಳಲ್ಲಿ ಮಾನಸಿಕವಾಗಿ ಕನ್ನಡಿಗರಿದ್ದು ಅವರಿಗೆ ಅಗತ್ಯವಾದ ಎಲ್ಲಾ ಮೂಲಸೌಲಭ್ಯಗಳನ್ನು ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರವು ಕಲ್ಪಿಸುತ್ತಿದೆ. ಗಡಿಯಲ್ಲಿರುವ ಸರಕಾರಿ, ಅನುದಾನಿತ ಕನ್ನಡ



ಶಾಲೆಗಳಿಗೆ ಅಗತ್ಯವಿರುವ ಪುಸ್ತಕಗಳು,ಶುದ್ದ ಕುಡಿಯುವ ನೀರಿನ ಘಟಕ, ಮೈದಾನ,ಕಾಂಪೌಂಡ್,ಕೋಠಡಿಗಳು,ಗ್ರಂಥಲಾಯ,ಪಿಠೋಪಕರಣ ಹಾಗೂ ಕನ್ನಡ ಭಾವನಗಳ ನಿರ್ಮಾಣಕ್ಕೆ ಅಗತ್ಯ ಅನುದಾನವನ್ನು ನೀಡಲಾಗುತ್ತಿದೆ. ಕೇರಳದಲ್ಲಿನ ಕಾಸರಗೋಡು ಹಾಗೂ ಮಹಾರಾಷ್ಟ್ರದಲ್ಲಿನ ಅಕ್ಕಲಕೋಟೆಯಲ್ಲಿ ಲಿಗಾಡೆ ತಾಯಿಯವರ ಹೆಸ-ರಿನಲ್ಲಿ ಕನ್ನಡ ಭವನ ನಿರ್ಮಾಣ ಪೂರ್ಣಗೊಂಡಿದ್ದು ಎರಡು ರಾಜ್ಯದ ಮುಖ್ಯಮಂತ್ರಿಗಳಿಂದ ಕನ್ನಡಭವನವನ್ನು ಉದ್ಘಾಟಿಸಲಾಗುವುದು.

ಗೋವದಲ್ಲಿ 4.5 ಲಕ್ಷ ಕನ್ನಡಿಗರು ವಾಸವಾಗಿದ್ದಾರೆ ಅವರಿಗಾಗಿ ಕನ್ನಡ ಭವನ ನಿರ್ಮಾಣಕ್ಕಾಗಿ ನಿವೇಶನವನ್ನು ಖರೀದಿ ಮಾಡಲಾಗಿದು ಕನ್ನಡ ಭಾವನ ನಿರ್ಮಾಣ-ಕ್ಕೆ ಚಾಲನೆ ನೀಡಲಾಗುವುದು. ಗಡಿಭಾಗದಲ್ಲಿನ ಕನ್ನಡ ನಿವಾಸಿಗಳ ಜಾತಿಯನ್ನು ರಾಜ್ಯದಲ್ಲಿಯು ಕೂಡ ಅದೆ ಜಾತಿಯನ್ನು ಪರಿಗಣಿಸಬೇಕು ಎಂದು ಮುಖ್ಯ ಕಾರ್ಯದರ್ಶಿಯವರೊಂದಿಗೆ ಚರ್ಚೆ ನಡೆಸಲಾಗಿದೆ. ಮಹಾರಾಷ್ಟ್ರದಲ್ಲಿ ಕನ್ನಡ ಶಾಲೆಗಗಳಿಗೆ ಮರಾಠ ಶಿಕ್ಷಕರನ್ನು ನೇಮಕ ಮಾಡುತ್ತಿರುವುದನ್ನು ಮುಖ್ಯಮಂತ್ರಿಗಳ ಗಮನಕ್ಕೆ ತಂದು 108 ಶಿಕ್ಷಕರನ್ನು ನೇಮಕಮಾಡುವುದಕ್ಕೆ ಕ್ರಮ ಕೈಗೊಳ್ಳಲಾಗಿದೆ. ಬಿದ್ದರ್ ಹಾಗೂ ರಾಯಚೂರು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಗಡಿ ಭಾಗದಲ್ಲಿ ಕನ್ನಡ ಉತ್ಸವ ಕಾರ್ಯಕ್ರಮ ನಡೆಸುವುದಕ್ಕೆ 5 ಲಕ್ಷ ಅನಮುದಾನವನ್ನು ನೀಡಲಾಗಿದು ಅಗತ್ಯ ಬಿದ್ದಲ್ಲಿ ಇನ್ನೂ 5 ಲಕ್ಷ ಅನುದಾನ ನೀಡಲಾಗುವುದು.

ಬಾಂಬೆ ಹಾಗೂ ಔರಾಂಗಬಾದ್ ನಲ್ಲಿ 200 ಕ್ಕೂ ಹೆಚ್ಚು ಕನ್ನಡ ಶಾಲೆಗಳಿವೆ. ಆಂಧ್ರ ಪ್ರದೇಶದಲ್ಲಿನ ಶ್ರೀಶೈಲದಲ್ಲಿ ಕನ್ನಡಿಗ-ರಿಗಾಗಿ ಕನ್ನಡ ಭವನ ನಿರ್ಮಾಣ ಮಾಡಲಾಗಿದೆ. ಹೊರದೇಶಗಳಲ್ಲಿನ ಹೊರನಾಡು ಕನ್ನಡಿಗರಿಗೂ ಕೂಡ ಅಗತ್ಯ ಕಾರ್ಯಕ್ರಮಗಳ ಅಯೋಜನೆ ಮಾಡಲಾಗುತ್ತಿದೆ ಬೇರೆ ಬೇರೆ ರಾಜ್ಯಗಳಲ್ಲಿರುವ ಕನ್ನಡಿಗರ ಹಿತವನ್ನು ಕಾಯುವುದಕ್ಕಾಗಿ ಗಡಿ ಪ್ರದೇಶ ಅಭಿವೃದ್ದಿ ಪ್ರಾಧಿಕಾರ ಅಗತ್ಯ ಕ್ರಮ ಕೈಗೊಳ್ಳುತ್ತಿದೆ ಎಂದು ತಿಳಿಸಿದರು. ವೀರಶೈವ ಲಿಂಗಾಯತ ಸಮಾಜದ ವತಿಯಿಂದ ರಾಜ್ಯ ಗಡಿ ಪ್ರದೇಶ ಅಭಿವೃದ್ದಿ ಪ್ರಾಧಿಕಾರದ ಅಧ್ಯಕ್ಷರಾದ ಸೋಮಣ್ಣ ಬೇವಿನಮರದ ರವರನ್ನು ಸನ್ಮಾನಿಸಿ ಗೌರವಿಸಲಾಯಿತು. ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಸದಸ್ಯರಾದ ಭಗತ್ ರಾಜ್ ಹಾಗೂ ಶಿವರೆಡ್ಡಿ ನವಲಿ ಮಾತನಾಡಿದರು. ಮಾಜಿ ಶಾಸಕ ಬಸವನಗೌಡ ಬ್ಯಾಗವಾಟ, ಸಿದ್ದಲಿಂಗಪ್ಪ ವಕೀಲರು,ಹರಿಹಾರಪಾಟೀಲ್,ಸೇ-ರಿದಂತೆ ವೀರಶೈವ ಲಿಂಗಾಯತ ಸಮಾಜದ ಮುಖಂಡರು ಭಾಗವಹಿಸಿದರು.

## ಸಾಹಿತ್ಯ ಸಿಂಚನ

ನಾರದ
ವೀಣೆ ಹಿಡಿದು ಲೋಕ ಸುತ್ತುವ
ದೇವರ್ಷಿ ನಾರದ ಮುನಿ,
ನಾರಾಯಣ ನಾರಾಯಣ ಎನ್ನುವ
ನಾದವೇ ಅವರ ಧ್ಯಾನ ಧುನಿ.

ದೇವಲೋಕದಿಂದ ಭೂಲೋಕದವರೆಗೂ
ಸಂದೇಶ ಹೊತ್ತ ದೂತನಾದ,
ಸತ್ಯ ಹೇಳಿ ಕಲಹ ಹುಟ್ಟಿಸಿ
ಧರ್ಮದ ಮಾರ್ಗ ತೋರಿಸಿದ ನಾರದ.

ಕಲಹದ ಹಿಂದೆ ಕಲ್ಯಾಣವಿತ್ತು,
ವಿಚಾರದ ಹಿಂದೆ ಜ್ಞಾನ;
ಅವರ ಮಾತುಗಳಲ್ಲಿ ಅಡಗಿತ್ತು
ಜೀವನದ ಮಹಾ ಪ್ರಮಾಣ.

ಭಕ್ತಿಯ ಬೀಜ ಬಿತ್ತಿದ ಮುನಿ,
ಸಂಗೀತದ ಮೊದಲ ಗುರು,
ನಾರದನ ನಾಮ ಸ್ಮರಣೆಯಲ್ಲಿ
ಮನಸಿಗೆ ಸಿಗುವ ಶಾಂತಿ ಸೂರು.

ನಾರಾಯಣ ನಾಮದ ನಾದದಲ್ಲಿ
ಲೋಕವೇ ಒಂದಾಗಲಿ,
ನಾರದನ ಸಂದೇಶದ ಬೆಳಕಿನಲ್ಲಿ
ಮಾನವ ಹೃದಯ ಜಾಗೃತವಾಗಲಿ.

**ಅಮರೇಶ್**

1ನೇ ಪುಟದಿಂದ....

ಕಾರ್ಯ ನಿರ್ವಹಿಸುತ್ತಿದ್ದಾರೆ ಎಂದರು. ದೇಶಕ್ಕೆ ಅಂತರ್ಜಲ ಮಾದರಿ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ. ಪಾಟೀಲ ಮಾತನಾಡಿ, ಲೋಗಾಂವಿಯಲ್ಲಿ ಕೆರೆ ತುಂಬುವ ಯೋಜನೆ ಮಾಡಿದಾಗ ಮತ್ತೊಂದು ಯೋಜನೆ ಅನುಷ್ಠಾನಗೊಳಿಸುವ ಸಂಕಲ್ಪ ಮಾಡಿದ್ದೆ. ಈಗ ಅದುವೇ ಹಳ್ಳ-ಕೊಳ್ಳಗಳನ್ನು ತುಂಬುವ ಮಹತ್ವಾಕಾಂಕ್ಷಿ ಯೋಜನೆಯಾಗಿದೆ ಎಂದರು. ನೀರಾವರಿ ಸಚಿವನಾಗಿದ್ದಾಗ ನೀರಾವರಿ ಕೆನಾಲ್ ಜಾಲದ ಮೇಲೆ 176 ಹಳ್ಳಗಳು ಬರುತ್ತವೆ. ಕಾಲುವೆ ಜಾಲ ವ್ಯಾಪ್ತಿಯ ಹಳ್ಳಗಳಿಗೆ ನೀರು ತುಂಬುವ ನಿರ್ಧರಿಸಿ, ಕೆರೆ ಸ್ವಚ್ಛ ಮಾಡಿ ಕಸ ಕಂಟಿ ಸ್ವಚ್ಛ ಮಾಡಿ ಪ್ರತಿ ಸಾವಿರ ಮೀಟರಗೆ ಒಂದು ಚೆಕ್ ಡ್ಯಾಂ ನಿರ್ಮಾಣ ಮಾಡಿ ನೀರು ಹಿಂಗಿಸುತ್ತಿದ್ದೇವೆ. ಇಂದು ಕಡೆ ಕೆರೆ ಉಳಿದಿದ್ದು, ಇನ್ನೊಂದು ಕಡೆ ಹಳ್ಳ ತುಂಬಲಾಗುವುದು ಎಂದರು. 10 ರಲ್ಲಿ 6 ಪ್ಯಾಕೇಜ್ ಕಾಮಗಾರಿ ಮುಕ್ತಾಯವಾಗಿವೆ. 277 ಕೋಟಿ ರೂ. ವೆಚ್ಚದಲ್ಲಿ ಪ್ರಾಯೋಗಿಕವಾಗಿ ಆರಂಭವಾಗಿದೆ ಎಂದ ಸಚಿವರು, ಕೆರೆ ತುಂಬುವ ಯೋಜನೆಯಿಂದ ಕೈಬಿಟ್ಟು ಹೋದ ಹಳ್ಳಿಗಳ ಹಳ್ಳ ತುಂಬುವ ಯೋಜನೆ ವ್ಯಾಪ್ತಿಗೆ ಸೇರುತ್ತವೆ ಎಂದರು. ವಿಜಯಪುರ ಜಿಲ್ಲೆಗೆ ಬರಗಾಲ ಜಿಲ್ಲೆ ಹಣೆಪಟ್ಟಿಯಿತ್ತು. ಒಂದು ಕಾಲದಲ್ಲಿ ಕುಡಿಯುವ ನೀರಿಗೂ ತತ್ವಾರವಿತ್ತು. ಟ್ಯಾಂಕರ್ ಮೂಲಕ ನೀರು ಪೂರೈಸಲಾಗುತ್ತಿತ್ತು. ಈಗ ನೀರಾವರಿ ಯೋಜನೆಯಿಂದ ಅಂತರ್ಜಲ ಮಟ್ಟ ಹೆಚ್ಚಾಗಿದ್ದರಿಂದ ಜಿಲ್ಲೆಯಲ್ಲಿ ಕುಡಿಯುವ ನೀರಿನ ಯಾವುದೇ ಸಮಸ್ಯೆ ಉಲ್ಬಣಿಸದಿರುವುದು ನನಗೆ ಅತೀವ ಸಂತಸವನ್ನುಂಟು ಮಾಡಿದೆ ಎಂದರು.ಬಬಲೇಶ್ವರ ಮತಕ್ಷೇತ್ರದಲ್ಲಿ ಸಿಎಸ್ ಆರ್ ಅನುದಾನದಲ್ಲಿ ಸರ್ಕಾರಿ ಶಾಲೆಗಳನ್ನು ಅಭಿವೃದ್ಧಿಪಡಿಸಲಾಗುವುದು. ಶಾಲಾ ಕೊಠಡಿ, ಸ್ಮಾರ್ಟ ಕ್ಲಾಸ್ ಶಾಲೆಗಳಿಗೆ ಕಟ್ಟಡ, ಶಾಲಾ ಮೈದಾನ ಅಭಿವೃದ್ಧಿಪಡಿಸಲಾಗುತ್ತಿದೆ. ಮತಕ್ಷೇತ್ರದ ಎಲ್ಲ ಶಾಲೆಗಳನ್ನು ಆಧುನಿಕ ಮಾದರಿ ಶಾಲೆಗಳನ್ನಾಗಿ ರೂಪುಗೊಳಿಸಲಾಗುತ್ತಿದೆ ಎಂದರು. ಕಣಮುಚನಾಳ ಹಾಗೂ ಮಮದಾಪೂರದಲ್ಲಿ ಟೊಯೋಟ ಕಂಪನಿಯವರು ನಿರ್ಮಿಸಿದ್ದು, ಮಾದರಿ ಶಾಲೆಗಳಾಗಿ ಹೊರಹೊಮ್ಮಿವೆ ಎಂದರು. ಎಲ್ಲ ಶಾಲೆಗಳಿಗೆ ನೀರಿನ ಜೊತೆಗೆ ಅದಕ್ಕೆ ಬೇಕಾದ ವಿದ್ಯುತ್ ಒದಗಿಸಲಾಗುತ್ತಿದೆ. ನೀರಾವರಿ, ಉದ್ಯೋಗ, ಶಿಕ್ಷಣ, ರಸ್ತೆ ಅಭಿವೃದ್ಧಿ ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಅಹರ್ನಿಶಿ ಕೆಲಸ ಮಾಡುತ್ತಿರುವುದಾಗಿ ಸಚಿವರು ಇದೇ ವೇಳೆ ತಿಳಿಸಿದರು. ಜಿಲ್ಲೆಯ 400 ಹಳ್ಳಿಗಳಲ್ಲಿ ಬಾಂದಾರ ನಿರ್ಮಾಣ ಕಾರ್ಯ ಹಂತ-ಹಂತವಾಗಿ ಮಾಡಲಾಗುತ್ತದೆ. ತನ್ಮೂಲಕ ಇಡೀ ಜಿಲ್ಲೆಯಲ್ಲಿ ಅಂತರ್ಜಲ ಮಟ್ಟ ದೇಶಕ್ಕೆ ಮಾದರಿಯಾಗುವ ಕಾರ್ಯ ಮಾಡುವುದಾಗಿ ಸಚಿವರು ಇದೇ ವೇಳೆ ಘೋಷಿಸಿದರು ಕಾರ್ಯಕ್ರಮದಲ್ಲಿ ಸಣ್ಣ ನೀರಾವರಿ ಇಲಾಖೆಯ ಎಂಜನೀಯರ್ ಕೊಳ್ಳಿ, ತಹಶೀಲ್ದಾರ್ ಸುರೇಶ ಚವಲರ, ತಾಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಸವಂತ್ರಾಯ ಬಿರಾದಾರ, ಸಣ್ಣ ನೀರಾವರಿ ಇಲಾಖೆಯ ಅಧಿಕಾರಿಗಳು, ಸ್ಥಳೀಯ ಜನಪ್ರತಿನಿಧಿಗಳು, ರೈತರು ಮತ್ತು ಸಾರ್ವಜನಿಕರು ಪಾಲ್ಗೊಂಡಿದ್ದರು.

# ಜಾಲಹಳ್ಳಿಯಲ್ಲಿ ಅದ್ದೂರಿಯಾಗಿ ವಿಶ್ವ ಕಾರ್ಮಿಕ ದಿನಾಚರಣೆ

**ನೈಜ್ಯ ದೆಸೆ ನ್ಯೂಸ್**

**ಜಾಲಹಳ್ಳಿ: ಗ್ರಾಮದ ಶ್ರಮಿಕ ಭವನದಲ್ಲಿ ವಿಶ್ವ ಕಾರ್ಮಿಕ ದಿನಾಚರಣೆಯನ್ನು ಬೆಳಿಗ್ಗೆ ಕಾರ್ಮಿಕ ಧ್ವಜಾರೋಹಣ ಮಾಡುವ ಮೂಲಕ ಅದ್ದೂರಿಯಾಗಿ ಆಚರಣೆ ಮಾಡಲಾಯಿತು. ೀಶಿಸಿ ಮಾತನಾಡಿದ ಮುಖಂಡರಾದ ಗಿರಿಯಪ್ಪ ಪೂಜಾರಿ ಅವರು, ಕಾರ್ಮಿಕರ ಸಮಸ್ಯೆಗಳ ಬಗ್ಗೆ ಗಮನ ಸೆಳೆದರು. ಪ್ರತಿಯೊಬ್ಬ ಕಾರ್ಮಿಕನಿಗೂ ಕನಿಷ್ಠ ವೇತನ ಸಿಗಬೇಕಾದ ಹಕ್ಕು ಇದ್ದರೂ, ಇಂದಿಗೂ ಸಂಪೂರ್ಣವಾಗಿ ಜಾರಿಗೆ ಬಂದಿಲ್ಲ ಎಂದು ಅವರು ಹೇಳಿದರು. ಸರಕಾರಕ್ಕೆ ಹಲವಾರು ಹೋರಾಟಗಳ ಮೂಲಕ ಮನವಿ ಸಲ್ಲಿಸಿದ್ದರೂ, ಇನ್ನೂ ನಿರೀಕ್ಷಿತ ಫಲ ಸಿಗದೆ ಇರುವುದನ್ನು ವಿಷಾದಿಸಿದರು.**

ಇದೇ ವೇಳೆ, ಗುತ್ತಿಗೆ ಆದ-ಾರದಲ್ಲಿ ಕೆಲಸ ಮಾಡುವ ಪೌರಕಾರ್ಮಿಕರಿಗೆ



ಉದ್ಯೋಗ ಭದ್ರತೆ ಇಲ್ಲದಿರುವುದು ದೊಡ್ಡ ಸಮಸ್ಯೆಯಾಗಿದೆ. ಕಾರ್ಮಿಕ ಕಾನೂನುಗಳನ್ನು ದುರ್ಬಲಗೊಳಿಸುವ ಪ್ರಯತ್ನಗಳು ನಡೆಯುತ್ತಿವೆ ಎಂಬುದನ್ನೂ ಅವರು ಹೇಳಿದರು. ಕೆಲಸದ ಗಂಟೆಗಳು ಹೆಚ್ಚಾಗುತ್ತಿರುವುದು, ವೇತನ ಕಡಿಮೆಯಾಗಿರುವುದು, ಸಾಮಾಜಿ-ಕ ಭದ್ರತಾ ಸೌಲಭ್ಯಗಳ ಕೊರತೆ ಇತ್ಯಾದಿ ಸಮಸ್ಯೆಗಳು ಕಾರ್ಮಿಕರನ್ನು ಸಂಕಷ್ಟಕ್ಕೆ ತಳ್ಳಿವೆ ಎಂದು ಹೇಳಿದರು. ಈ ಎಲ್ಲಾ ಸಮಸ್ಯೆಗಳ ಪರಿಹಾರಕ್ಕಾಗಿ ಇದೇ ತಿಂಗಳ ಮೇ 30ರಂದು ರಾಯಚೂರಿನಲ್ಲಿ ಕನಿಷ್ಠ ವೇತನ ಜಾರಿಗಾಗಿ ಬೃಹತ್ ಹೋರಾಟವನ್ನು ಹಮ್ಮಿಕೊಳ್ಳಲಾಗುವುದು ಎಂದು ತಿಳಿಸಿದರು.

ಸಾವಿರಾರು ಕಾರ್ಮಿಕರು ಭಾಗವಹಿಸುವ ನಿರೀಕ್ಷೆಯಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಹೋರಾಟವನ್ನು ಯಶಸ್ವಿಗೊಳಿಸಬೇಕೆಂದು ಕರೆ ನೀಡಿದರು. ನಮ್ಮ ಗುರಿ ಈಡೇರುವವರೆಗೆ ಹೋರಾಟ ಮುಂದುವ-ರಿಯಬೇಕು ಎಂದು ಅವರು ಹೇಳಿದರು. ಕಾರ್ಯಕ್ರಮದ ಆರಂಭದಲ್ಲಿ ಮುದರಂಗಪ್ಪ ಯರಕಮಟ್ಟಿ ಅವರು ಸ್ವಾಗತ ಕೋರಿ ನಿರೂಪಣೆ ಮಾಡಿದರು. ಈ ಸಂದರ್ಭದಲ್ಲಿ ಮೈಬೂಬ್ ಸಾಬ್ ಕುರುಕುಂದಿ, ಹೈದರ್ ಬಿ ಉದ್ದಾರ, ಮುದ್ದಮ್ಮ, ಕಾಶಿನಾಥ್, ಮುದ್ದು ರಂಗಪ್ಪ, ಬಾಲಯ್ಯ ಗೋಸಲ್, ಸತ್ಯಭಾಮ, ಅನ್ನಮ್ಮ ರಾಂಪಾಳಿ, ಮಲ್ಲಮ್ಮ ಬೈಚಬಾಳ್, ಶಂಕರ್ ಸೋಮನ ಮರಡಿ ಸೇರಿದಂತೆ ನೂರಾರು ಕಾರ್ಮಿಕ ಮುಖಂಡರು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

# ಹೋಲಿ ಫ್ಯಾಮಿಲಿ ಶಾಲೆಯಲ್ಲಿ ಕಾರ್ಮಿಕರ ದಿನಾಚರಣೆ:

## ಶಾಲೆಯ ಬೆನ್ನೆಲುಬಾದ ಕಾರ್ಮಿಕರಿಗೆ ಗೌರವ ಸನ್ಮಾನ



**ನೈಜ್ಯ ದೆಸೆ ನ್ಯೂಸ್**

**ಸಿಂಧನೂರು: ನಗರದ 30 ವರ್ಷಗಳ ಇತಿಹಾಸ ಹೊಂದಿರುವ ಸುಪ್ರಸಿದ್ಧ *ಹೋಲಿ ಫ್ಯಾಮಿಲಿ ಶಾಲೆಯಲ್ಲಿ* ಅಂತರರಾಷ್ಟ್ರೀಯ ಕಾರ್ಮಿಕರ ದಿನವನ್ನು ಅತ್ಯಂತ ಸಂಭ್ರಮ ಮತ್ತು ಗೌರವದಿಂದ ಆಚರಿಸಲಾಯಿತು. ಶಾಲಾ ಆವರಣದ ನೈರ್ಮಲ್ಯ ಹಾಗೂ ಶಿಸ್ತಿನ ಹಿಂದೆ ಅವಿರತವಾಗಿ ಶ್ರಮಿಸುವ ಕಾರ್ಮಿಕರ ಸೇವೆಯನ್ನು ಈ ಸಂದರ್ಭದಲ್ಲಿ ಸ್ಮರಿಸಲಾಯಿತು.**

ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ *ಫಾದರ್ ಜ್ಞಾನಪ್ರಕಾಶ್* ಅವರು ಕಾರ್ಮಿಕರ ಮಹತ್ವದ ಬಗ್ಗೆ ಹೀಗೆ ಹಂಚಿಕೊಂಡರು: "ಶಾಲೆಯ ಆವರಣದ ಸ್ವಚ್ಛತೆ ಮತ್ತು ನೈರ್ಮಲ್ಯದ ಹಿಂದೆ ಕಾರ್ಮಿಕರ ದೊಡ್ಡ ಶ್ರಮವಿದೆ. ಇವರೇ ಶಾಲೆಯ ನೈಜ ಬೆನ್ನೆಲುಬು. ಇಂದು ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಆರೋಗ್ಯವಂತರಾಗಿ ತಮ್ಮ ಜವಾಬ್ದಾ-ರಿಗಳನ್ನು ಉತ್ತಮವಾಗಿ ನಿರ್ವಹಿಸುತ್ತಿದ್ದಾರೆ ಎಂದರೆ, ಅದಕ್ಕೆ ಕಾರ್ಮಿಕರ ನಿರಂತರ ಸೇವೆಯೇ ಕಾರಣ. ಅವರ ಶ್ರೇಯಸ್ಸು ಮತ್ತು ಶ್ರಮ ನಮಗೆಲ್ಲರಿಗೂ ಮಾದರಿ."

ಸನ್ಮಾನ ಮತ್ತು ಗೌರವ:* ಶಾಲೆಯ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿರುವ ಕಾರ್ಮಿಕರನ್ನು ಶಾಲಾ ಆಡಳಿತ ಮಂಡಳಿಯ ವತಿಯಿಂದ ಶಾಲು ಹೊದಿಸಿ, ಹೂಮಾಲೆ ಹಾಕಿ ಆತ್ಮೀಯವಾಗಿ ಸನ್ಮಾನಿಸಲಾಯಿತು. ಈ ಮೂಲಕ ಅವರ ಶ್ರಮಕ್ಕೆ ಗೌರವ ಸಲ್ಲಿಸಲಾಯಿತು. ಕಾರ್ಯಕ್ರಮದಲ್ಲಿ ಶಾಲೆಯ ಶಿಕ್ಷಕ ವೃಂದ, ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡು ಕಾರ್ಮಿಕರಿಗೆ ಕೃತಜ್ಞತೆ ಸಲ್ಲಿಸಿದರು.

# ಸಂಭ್ರಮದಿಂದ ಜರುಗಿದ ದುರ್ಗಾದೇವಿ ಜಾತ್ರಾ ಮಹೋತ್ಸವ

**ನೈಜ್ಯ ದೆಸೆ ನ್ಯೂಸ್**

**ತಾಳಿಕೋಟೆ: ತಾಲ್ಲೂಕಿನ ಚಬನೂರ ಗ್ರಾಮದ ಮಾದರ ಚೆನ್ನಯ್ಯ ಸಮಾಜದ ದೇವತೆಯಾದ ದುರ್ಗಾದೇವಿಯ ಜಾತ್ರಾಮಹೋತ್ಸವವು ಭಕ್ತಿ, ಶ್ರದ್ದೆ, ಸಂಭ್ರಮಗಳಿಂದ ನೆರವೇರಿತು. ತನ್ನಿಮಿತ್ತ ಹಲವು ಧಾರ್ಮಿಕ ಕಾರ್ಯಕ್ರಮಗಳು ಜರುಗಿದವು. ಎ.24 ರಂದು ಹಲಗಿ ಮಜಲು, ಚೌಡಕಿ ಪದಗಳು, ಹಾಗೂ 25 ರಂದು ದುರ್ಗಾದೇವಿಯ ದರ್ಶನ, 26 ರಂದು ತಿಪ್ಪಣ್ಣ ಸುಬ್ಬಣ್ಣ ಹಿರೇಕುರುಬರ ಇವರಿಂದ ಅನ್ನ ಸಂತರ್ಪಣೆ ನಡೆಯಿತು. ಏಪ್ರಿಲ್ 27ರಂದು ಎಲ್ಲಮ್ಮ ದೇವಿಯ ಪೌರಾಣಿಕ ಬೈಲಾಟ ಕಾರ್ಯಕ್ರಮ ಪ್ರದರ್ಶಿಸಲಾಯಿತು.**

ಏಪ್ರಿಲ್ 28ರಂದು ಶ್ರೀ ಮಾತಾ ದುರ್ಗಾದೇವಿಯ ಪಲ್ಲಕ್ಕಿ ಉತ್ಸವ ಸಕಲ ವಾದ್ಯ ಮೇಳಗಳೊಂದಿಗೆ ಜರುಗಿತು.ನಂತರ ಶ್ರೀ



ದುರ್ಗಾ ದೇವಿವು ಗರ್ಭಗುಡಿ ಪ್ರವೇಶಿಸಿದಳು. ಜಾತ್ರಾ ಮಹೋತ್ಸವ ಅಂಗವಾಗಿ ಧರ್ಮಸಭೆ ಜರುಗಿತು. ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಚಬನೂರ ರಾಮಲಿಂಗೇಶ್ವರ ಮಠದ ಸಿದ್ದಿಪುರುಷ ಶ್ರೀರಾಮಲಿಂಗಯ್ಯ ಮಹಾಸ್ವಾಮಿಗಳು ವಹಿಸಿದ್ದರು. ಗ್ರಾಮದ ಗಣ್ಯರಾದ ಬಿ.ಬಿ. ಪಾಟೀಲ ಅಧ್ಯಕ್ಷತೆ ವಹಿಸಿದ್ದರು. ಬಿಜೆಪಿ ಮುಖಂಡ ಬಸನಗೌಡ ಪಾಟೀಲ ಯಡಿಯಾಪುರ ಸಮಾರಂಭವನ್ನು ಉದ್ಘಾಟಿಸಿದರು.

ಕಾರ್ಯಕ್ರಮದಲ್ಲಿ ಗ್ರಾಮದ ಗಣ್ಯರು ಹಿರಿಯರು ಹಾಗೂ ಶ್ರೀ ಮಾತಾ ದುರ್ಗಾದೇವಿ ಜಾತ್ರಾ ಮಹೋತ್ಸವ ಕಮಿಟಿಯ



ಪದಾಧಿಕಾರಿಗಳಾದ ಸಿದ್ದಣ್ಣ ಹೋಳಗಿ, ಸಿದ್ದಪ್ಪ ದೊಡಮನಿ, ಪೀರಪ್ಪ ಯ.ದೊಡಮನಿ, ಶೇಖಪ್ಪ ಹೋಳಗಿ, ಪೀರಪ್ಪ ತಿ.ದೊಡಮನಿ, ಕಾಸಪ್ಪ ಕಲ್ಮನಿ, ಅಮೋಘ ದೊಡಮನಿ, ಹಣಮಂತ ದು.ದೊಡಮನಿ,ಸಿದ್ದಪ್ಪ ಮ.ಹೋಳಗಿ, ಭೀಮಪ್ಪ ದು. ತಮದಡ್ಡಿ, ದಂಡಪ್ಪ ಅ.ಗುಗ್ರಿ, ತಿಪ್ಪಣ್ಣ ಚ.ನಿರಲಗಿ, ಪರಸಪ್ಪ ಯ. ಸಾಸನೂರ, ಸಿದ್ದಪ್ಪ ಮ.ಹಂದ್ರಾಳ ಹಾಗೂ ಅಪಾರ ಸಂಖ್ಯೆಯಲ್ಲಿ ಭಕ್ತಾದಿಗಳು ಪಾಲ್ಗೊಂಡಿದ್ದರು.

# ಜೆ.ಎಸ್.ಎಸ್. ಕಾರ್ಯದರ್ಶಿ ಸಾಹೇಬಗೌಡಗೆ ಸನ್ಮಾನ



**ನೈಜ್ಯ ದೆಸೆ ನ್ಯೂಸ್**

**ತಾಳಿಕೋಟಿ: ತಾಲೂಕಿನ ಬೇಲೂರ ಕ್ರಾಸ್ ಕೊಡಗಾನೂರದ ಜೆಎಸ್ ಎಸ್ ಪ್ರಾಥ-ಮಿಕ ಹಾಗೂ ಪ್ರೌಢಶಾಲೆಯ 10 ನೇ ತರಗತಿ ವಿದ್ಯಾರ್ಥಿನಿ ಸೌಪರ್ಣಿಕಾ ಸಂಗನಗೌಡ ಪಾಟೀಲ 2025-26ನೇ ಸಾಲಿನ ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ರಾಜ್ಯಕ್ಕೆ ತೃತೀಯ ಸ್ಥಾನ ಪಡೆದುಕೊಂಡ ಹಿನ್ನೆಲೆಯಲ್ಲಿ ಸಂಸ್ಥೆಯ ಕಾರ್ಯದರ್ಶಿ ಸಾಹೇಬಗೌಡ ಎಸ್.ಗಬಸಾವಳಗಿ,ಹಾಗೂ ಶಿಕ್ಷಕ ಸಲೀಮ ಮನಿಯಾರ ಇವರನ್ನು ವಿದ್ಯಾರ್ಥಿನಿಯ ಪಾಲಕರು ಸನ್ಮಾನಿಸಿ ಗೌರವಿಸಿದರು.**

ಏಪ್ರಿಲ್ 27ರಂದು ಶಾಲೆಯಲ್ಲಿ ಹಮ್ಮಿಕೊಂಡ 2025-26 ನೇ ಸಾಲಿನ ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಅತ್ಯುತ್ತಮ ಸಾಧನೆ ತೋರಿದ ಪ್ರತಿಭಾವಂತ ವಿದ್ಯಾರ್ಥಿಗಳ ಸನ್ಮಾನ ಸಮಾರಂಭದಲ್ಲಿ ಅವರಿಗೆ ಈ ಗೌರವ ಸಮರ್ಪಣೆ ಸಲ್ಲಿಸಲಾಯಿತು.ನಾವದಗಿ ಬ್ರಹನ್ಮಠದ ಷ.ಬ್ರ.ಶ್ರೀ ರಾಜ ಗುರು ರಾಜೇಂದ್ರ ಒಡೆಯರ ಶಿವಾಚಾರ್ಯ ಮಹಾಸ್ವಾಮಿಗಳು ಸಾನಿಧ್ಯ ವಹಿಸಿದ್ದರು.


ಈ ಸಮಯದಲ್ಲಿ ಸಂಸ್ಥೆಯ ಅಧ್ಯಕ್ಷರಾದ ಸಿದ್ದನಗೌಡ ಗಬಸಾವಳಗಿ, ಕಾರ್ಯದರ್ಶಿ ಸಿ.ಆರ್.ಸಿ. ಸಂಗಮೇಶ ಪಾಲ್ಕಿ, ಮುಖ್ಯೋಪಾಧ್ಯಾಯರಾದ ವಿಜಯಲಕ್ಷ್ಮಿ ಎಸ್ ಗಬಸಾವಳಗಿ, ವಿನಾಯಕ ಪಟಗಾರ, ಗಣ್ಯರಾದ ಪ್ರಕಾಶ ನಾಯಕ್,ಮಾದೇವ ತಳವಾರ, ರೇವಣಸಿದ್ದಪ್ಪ ಗುಗ್ರಿ,ಸಂಗನಗೌಡ ಪಾಟೀಲ, ಶಿಕ್ಷಕರಾದ ಹಣಮಂತ ಮೇಟಿ,ಸಾಬಣ್ಣ ಸರ್, ಮುತ್ತುರಾಜ ಯಡ್ರಾಮಿ, ಪೋಷಕರು ಹಾಗೂ ವಿದ್ಯಾರ್ಥಿಗಳು ಇದ್ದರು.

# ಎಐ ತಂತ್ರಜ್ಞಾನದಿಂದ ನಿರುದ್ಯೋಗ ಸಮಸ್ಯೆಗಳು ಹೆಚ್ಚಾಗುತ್ತಿವೆ: ಡಿಎಚ್.ಪೂಜಾರ್ ಅಭಿಪ್ರಾಯ

**ನೈಜ್ಯ ದೆಸೆ ನ್ಯೂಸ್**

**ಅಮೇರಿಕಾದ ಚಿಕಾಗೋ ನಗರದ ಎ ಮಾರ್ಕೆಟ್ ನಲ್ಲಿ ನಡೆದ ಕಾರ್ಮಿಕ ಕ್ರಾಂತಿ ಜಗತ್ತಿನ ದುಡಿಯುವ ವರ್ಗಕ್ಕೆ ಸ್ಪೂರ್ತಿಯ ಶಕ್ತಿ. ಅಂದಿನಿ ದಿನ ಮಾಲೀಕ ವರ್ಗ ದಿನದ 18 ತಾಸು ದುಡಿಸುತ್ತಾ ಅತ್ಯಂತ ನಿಕೃಷ್ಟ ಕ್ರೂರ ಶ್ರಮ ಶೋಷಣೆ ವಿರುದ್ಧ ಸಮರ ಸಾರಿದ ದಿನ. ಇಡೀ ಜಗತ್ತಿನ ಕಾರ್ಮಿಕ ವರ್ಗಕ್ಕೆ ದಿಕ್ಕು ತೋರಿಸಿದ.**

ಸಮ್ರಾಜ್ಯ ಶಾಹಿಗಳಿಗೆ ಸಂಘರ್ಷದ ಕ್ರಾಂತಿಯ ಕಹಳೆಯಿಂದ ತಕ್ಕ ಪಾಠ ಕಲಿಸಿದ್ದರಿಂದ ಸಮಾನ ದುಡಿಮೆಗೆ ಸಮಾನ ವೇತನ, ಕಾರ್ಮಿಕ ವರ್ಗಕ್ಕೆ ಜೀವನ ಮತ್ತು ಬದುಕಿನ ಭದ್ರತೆಗೆ ಬುನಾದಿ ಹಾಕಿಕೊಟ್ಟ ಆ ಅಮರವೀರರಿಗೆ ಲಾಲ್ ಸಲಾಂ ಅವರ ತ್ಯಾಗ ಬಲಿದಾನಕ್ಕೆ ನಾವು ಯಾವತ್ತು ಚಿರಋಣಿ ಎಂದು ಜಿಲ್ಲಾಧ್ಯಕ್ಷರಾದ ಬಿ.ಎನ್.ಯರದಿಹಾಳ ಹೇಳಿದರು. ಟ್ರೇಡ್ ಯೂನಿಯನ್ ಸೆಂಟರ್ ಆಫ್ ಇಂಡಿಯಾ ಟಿಯುಸಿಐ ಜಿಲ್ಲಾಸಮಿತಿ ನೇತೃತ್ವದಲ್ಲಿ 140ನೇ ವಿಶ್ವ ಕಾರ್ಮಿಕ ದಿನಾಚರಣೆ ಆಚರಿಸಿ ಪ್ರಾಸ್ತಾವಿಕವಾಗಿ




ಮಾತನಾಡಿದರು. ನಂತರ ಸಿಪಿಐಎಂಎಲ್ ಮಾಸ ಲೈನ್ ರಾಜ್ಯ ಕಾರ್ಯದರ್ಶಿ ಡಿ.ಎಚ್.ಪೂಜಾರ್ ಮಾತನಾಡಿ, ಕಾರ್ಮಿಕರ ಮೂಲಭೂತ ಹಕ್ಕುಗಳನ್ನು ಕೇಂದ್ರ ಸರ್ಕಾರ ಕಿತ್ತಿಕೊಳ್ಳುತ್ತಿದೆ.

ಕಾರ್ಮಿಕ ಕಾಯ್ದೆಗಳನ್ನು ತಿದ್ದುಪಡಿ ಮಾಡುವ ಮೂಲಕ ಕಾರ್ಪೋರೇಟ್ ಕಂಪನಿಗಳಿಗೆ ಕಾರ್ಮಿಕರ ಶ್ರಮ ಲೂಟಿಮಾಡಲು ಅನುಕೂಲ ಕಲ್ಪಿಸಿದೆ. ಅಗತ್ಯ ವಸ್ತುಗಳು ಬೆಲೆಯೂ ಮೂರೂಪಟ್ಟು ಹೆಚ್ಚಾದರೂ ಸಹ ಕಾರ್ಮಿಕರ ವೇತನವನ್ನು ಹೆಚ್ಚು ಮಾಡುತ್ತಿಲ್ಲ. ನ್ಯಾಯಯುತ ಹಕ್ಕುಗಳಿಗಾಗಿ ಹೊರಡುವ ಕಾರ್ಮಿಕರ ಮೇಲೆ ಸುಳ್ಳು ಪ್ರಕರಣ ದಾಖಲಿಸಿ ಕಾರ್ಮಿಕರ ಚಳುವಳಿಯನ್ನು ಹತ್ತಿಕ್ಕುತ್ತಿವೆ. ಇದಲ್ಲದೆ ದುಡಿವ ಜನರ ಐಕ್ಯತೆಯನ್ನು ಮುರಿಯಲು ಕೋಮುವಾದ ಮತ್ತು ಜಾತಿವಾದವನ್ನು ಉಗ್ರರೂಪದಲ್ಲಿ ಬಳಿಕೆ ಮಾಡಿ ಕೊಳ್ಳುತ್ತದೆ. ಸರ್ಕಾರದ ಜನವಿರೋಧಿ ನೀತಿಗಳಿಂದ ದೇಶ ಆರ್ಥಿಕ ಬಿಕ್ಕಟ್ಟಿನಲ್ಲಿ ಸಿಲುಕಿದೆ.

ದೇಶದ ಸಾಲ 205 ಲಕ್ಷ ಕೋಟಿಗೆ ಏರಿದೆ.

ಎಐ ತಂತ್ರಜ್ಞಾನದಿಂದ ನಿರುದ್ಯೋಗ ಸಮಸ್ಯೆ ಹೆಚ್ಚಾಗಿದೆ. ವಿಜ್ಞಾನ ತಂತ್ರಜ್ಞಾನವು ಜನತೆಯ ಅಭಿವೃದ್ಧಿಗೆ ಬಳಿಕೆಯಾಗುವ ಬದಲು ಜನರನ್ನು ಶೋಷಣೆ ಮಾಡಲು ಬಳಿಕೆಯಾಗುತ್ತಿದೆ. ಎಲ್ಲಾ ಅಳುವ ಪಕ್ಷಗಳು ಕಾರ್ಪೋರೇಟ್ ಕಂಪನಿಗಳ ಇತಾಶಕ್ತಿ ಕಾಪಾಡುತ್ತಿವೆ. ಆಗಾಗಿ ರೈತರು ಕಾರ್ಮಿಕರು ಬಲಿಷ್ಠ ಚಳುವಳಿ ಕಟ್ಟುವುದರೊಂದಿಗೆ ದಲ್ಲಾಳಿ ಸರ್ಕಾರವನ್ನು ಕಿತ್ತೆಸೆಯಬೇಕೆಂದು ಕರೆ ಕೊಟ್ಟರು. ಕೆ.ಆರ್.ಎಸ್ ತಾಲೂಕು ಅಧ್ಯಕ್ಷ ರಮೇಶ ಪಾಟೀಲ್ ಬೇರ್ಗಿ ಮಾತನಾಡಿ, ಮನೆರೇಗಾ ಕಾಯ್ದೆಗೆ ತಿದ್ದುಪಡೆ ತಂದು, ವಿ.ಬಿ.ರಾಮಜಿ ಕಾಯ್ದೆಯನ್ನು ಜಾರಿಗೆ ತಂದು ಗ್ರಾಮೀಣ ಜನರ ಕೂಲಿಯ ಹಕ್ಕನ್ನು ಕಿತ್ತಿಕೊಳ್ಳಲಾಗಿದೆ ಪ್ರಸ್ತುತ ಸರ್ಕಾರಗಳು ಬಲಾಢ್ಯರ ಪರವಾಗಿ ಕೆಲಸ ಮಾಡುತ್ತಿವೆ. ಆದ-್ದರಿಂದ ಜಾತಿ ಭೇದ, ಧರ್ಮ, ಮರೆತು ಐಕ್ಯತೆಯಿಂದ ಹೋರಾಡಬೇಕಾಗಿದೆ ಎಂದರು.

ಈ ಸಂದರ್ಭದಲ್ಲಿ: ಸಿಪಿಐಎಂಎಲ್ ಮಾಸ್ ಲೈನ್ ತಾಲೂಕು ಅಧ್ಯಕ್ಷ ಯಲ್ಲಪ್ಪ ಭಜಂತ್ರಿ, ಕರ್ನಾಟಕ ಅಮಾಲರ ಸಂಘ 7ನೇಮೇಲ್ ಕ್ಯಾಂಪ್ ಅಧ್ಯಕ್ಷ ಬಸಪ್ಪ ಕಡಬೂರ, ನಿರುಪಾದಿ ರಾಮಣ್ಣ ವೀರಾಪೂರ, ಹನಮಂತ ಪಂಪಣ್ಣ ಯರದೊಡ್ಡಿ, ಶ್ರೀಶೈಲ, ಮಲ್ಲಿಕಾರ್ಜುನ, ಅಮಲಾರ ಸಂಘ ಕಲ್ಮಂಗಿ ಅಧ್ಯಕ್ಷ ಬಸವರಾಜ ಗುಂಡದ, ಶರಣಪ್ಪ ಲಿಂಗದಹಳ್ಳಿ, ಶರಣೆಗೌಡ ಹಳೆಮನಿ, ಮಲ್ಲಿಕಾರ್ಜುನ ಲಿಂಗದಹಳ್ಳಿ, ರಡ್ಡೆಪ್ಪ ಮೂಲಿಮನಿ, ಮಲ್ಲಿಕಾರ್ಜುನ ಮೈಲಾಪುರ, ಚಂದ್ರಗೌಡ ಹಳೆಮನೆ, ಅರುಣಕುಮಾರ ಹಾಗೂ ಬೀದಿ ಬದಿ ವ್ಯಾಪಾರಿಗಳ ಸಂಘದ ಅಧ್ಯಕ್ಷ ಖಾಸಿಂ, ರಮೇಶ ಬಾದಾಮಿ, ರಹೀಮ್ ಎಂ.ಪಾಷಾ. ಜಾಬರ್ ಮುನೀರ್, ಸೇರಿದಂತೆ ಅನೇಕ ಕಾರ್ಮಿಕರು ಇದ್ದರು.

## ನೇಮಕಾತಿ ಪ್ರಕಟಣೆ

ಕರ್ನಾಟಕ ಹೈಕೋರ್ಟ್ ನೇಮಕಾತಿ 2026 –101 ಪಿಯೋನ್/ವಾಚ್‌ಮ್ಯಾನ್/ಸ್ವೀಪರ್ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಕರ್ನಾಟಕ ಹೈಕೋರ್ಟ್ ನೇಮಕಾತಿ 2026: 101 ಪಿಯೋನ್/ವಾಚ್‌ಮ್ಯಾನ್/ಸ್ವೀಪರ್ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಕರ್ನಾಟಕ ಹೈಕೋರ್ಟ್ ಏಪ್ರಿಲ್ 2026 ರ ಕರ್ನಾಟಕ ಹೈಕೋರ್ಟ್ ಅಧಿಕೃತ ಅಧಿಸೂಚನೆಯ ಮೂಲಕ ಪಿಯೋನ್/ ವಾಚ್‌ಮ್ಯಾನ್/ಸ್ವೀಪರ್ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಕರ್ನಾಟಕ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 21–ಮೇ–2026 ರಂದು ಅಥವಾ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 22–04–2026 ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 21–ಮೇ–2026 ಅಧಿಕೃತ ವೆಬ್‌ಸೈಟ್: judiciary.karnataka.gov.in

## ವಕೀಲರ ಚುನಾವಣೆ: ಅನುಸೂರ್ ಪೆನಾಲ ಭರ್ಜರಿ ಗೆಲುವು

ನೈಜ್ಯ ದೆಸೆ ನ್ಯೂಸ್

**ಯಾದಗಿರಿ: ಜಿಲ್ಲೆಯ ಸುರಪುರ ತಾಲೂಕಿನ ವಕೀಲರ ಸಂಘದ ಚುನಾವಣೆಗೆ ಗುರುವಾರ ಮತದಾನ ನಡೆಯಿತು ಅದೇ ದಿನ ಸಾಯಂಕಾಲ ಮತ ಎಣಿಕೆ ಆರಂಭವಾಗಿ. ಅನಸೂರು ಪೆನಾಲನ್ನ ಭರ್ಜರಿ ಜಯಗಳಿಸಿದರು.**

ರೋಚಕದಿಂದ ಕೂಡಿದ ಚುನಾವಣೆಯಲ್ಲಿ ಬೆಳಿಗ್ಗೆ ಎಂಟು ಗಂಟೆಯಿಂದ ಮಧ್ಯಾಹ್ನ 3 ಗಂಟೆಯವರೆಗೆ ವಕೀಲರು ಹುಮ್ಮಸ್ಸಿನಿಂದ ಮತದಾನ ಚಲಾವಣೆ ಮಾಡಿದರು. ಒಟ್ಟು 186 ಮತದಾನರ ಮತದಾನರ ಪೈಕಿ 178 ಮತದಾನ ಚಲಾವಣೆಯಾಗಿದ್ದವು. ನಂತರ 4:00ಯಿಂದ ನಡೆದ ಮತ ಎಣಿಕೆಯಲ್ಲಿ ಎರಡು ಮತಗಳು ಕುಲಗೆಟ್ಟಿದ್ದವು. ಸಂಜೆ 7 ಗಂಟೆಗೆ ಮತ ಎಣಿಕೆ ಮುಗಿದು ಫಲಿತಾಂಶ ಘೋಷಣೆ ಮಾಡಲಾಯಿತು.



ಅಧ್ಯಕ್ಷ ಸ್ಥಾನಕ್ಕೆ. ಬಸವರಾಜ್ ಅನುಸೂರ್ 112 ಮತಗಳನ್ನು ಪಡೆದರೆ ಪ್ರತಿ ಸ್ಪರ್ಧೆ ಚವಾ ಲಕ್ಷ್ಮಿ ಪದ್ಮಾವತಿ 64 ಮತ ಪಡೆದು 48 ಮತಗಳ ಅಂತರದಿಂದ ಪರಾಭವಗೊಂಡರು.

ಉಪಾಧ್ಯಕ್ಷ ಸ್ಥಾನಕ್ಕೆ ಮಲ್ಲಣ್ಣ ಬೋವಿ 124 ಮತ ಪಡೆದರೆ ಸಂಗಪ್ಪ ಬಡಿಗೇರ್ ಅನ್ನೋದು112ಮತ ಪಡೆದು ವಿಜಯಶಾಲಿಯಾದರು ಪ್ರತಿಸ್ಪರ್ಧಿ ಸಂತೋಷ್ ಕುಮಾರ್ ನಾಯಕ್ 87 ಮತಗಳನ್ನು ಪಡೆದು ಪರಾಭವ ಗೊಂಡರು. ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕೆ. ಬಲ ಭೀಮ ನಾಯಕ್ 98 ಮತಗಳನ್ನು ಪಡೆದರೆ ಪ್ರತಿಸ್ಪರ್ಧಿ ದೇವರಾಜ್ ಜೋಗಿನ್ 79 ಮತಗಳನ್ನು ಪಡೆದು ಪರಾಭವ ಗೊಂಡರು. ಗ್ರಂಥಪಾಲಕರ ಸ್ಥಾನಕ್ಕೆ. ಗೌಡಪ್ಪ ಗೌಡ ನಗನೂರ್ 110 ಮತ ಪಡೆದರೆ ಪ್ರತಿಸ್ಪರ್ಧಿ ವಿನಾಯಕ್ ಜೆ?ವರ್ಗಿ 61 ಮತಗಳನ್ನು ಪಡೆದು ಪರಾಭವ ಗೊಂಡರು.

ಸಹ ಕಾರ್ಯದರ್ಶಿ. ದೇವರಾಜ್ ನಾಯಕ .ಖಜಾಂಚಿ. ವಿಜಯಲಕ್ಷ್ಮಿ ಕೊಳ್ಳಿ ಎರಡು ಸ್ಥಾನಗಳು ಅವಿರೋಧವಾಗಿ ಆಯ್ಕೆಯಾಗಿದ್ದವು. ಒಟ್ಟಾರೆಯಾಗಿ ಚುನಾವಣೆಯಲ್ಲಿ ಹನಸೂರು ಪೆನಾಲಿಗೆ ಭರ್ಜರಿ ಗೆಲುವು ಸಾಧಿಸಿದ್ದಾರೆ. ಚುನಾವಣಾ ಅಧಿಕಾರಿಯಾಗಿ ನಂದನಗೌಡ ಪಾಟೀಲ್. ಸಾಯಕ ಚುನಾವಣೆ ಅಧಿಕಾ–ರಿಯಾಗಿ ಜಗದೀಶ್ ಜಮಾದರಿಖಾನೆ. ಸುರೇಂದ್ರ ದೊಡ್ಮನಿ ಕರ್ತವ್ಯ ನಿರ್ವಹಿಸಿದರು. ವಿಜಯೋತ್ಸವ ಹರ್ಷೋದ್ಗಾರ. ಫಲಿತಾಂಶ ಪ್ರಕಟವಾಗುತ್ತಿದ್ದಂತೆ ಕೋರ್ಟ್ ಆವರಣದಲ್ಲಿ ವಿಜಯಶಾಲಿಯಾದ ಅನ್ಸೂರ್ ಪೆನಲ್ನ ಅಭ್ಯರ್ಥಿಗಳು ಮತ್ತು ಅವರ ಬೆಂಬಲಿಗರು ಪಟಾಕಿ ಸಿಡಿಸಿ. ಪರಸ್ಪರ ಗುಲಾಲ್ ಎರಚಿ . ಸ್ವೀಟ್ ತಿನಿಸುವ ಮೂಲಕ ವಿಜಯೋತ್ಸವ ಆಚರಿಸಿದರು.

## ಐಸಿಎಸ್‌ಇ ಪರೀಕ್ಷಾ ಫಲಿತಾಂಶ ಡ್ಯಾಫೋಡಿಲ್ಸ್ ಕಾನ್ವೆಂಟ್ ಶಾಲೆಯ ವರುಣ್ ಟಾಫರ್

ನೈಜ್ಯ ದೆಸೆ ನ್ಯೂಸ್

**ಹತ್ತನೆ ತರಗತಿಗೆ ಸಮನಾದ ಐಸಿಎಸ್‌ಇ ಪರೀಕ್ಷಾ ಫಲಿತಾಂಶ ಹೊರಬಿದ್ದಿದ್ದು, ಯುವಿಎಸ್ ಸ್ಥಳೀಯ ಡ್ಯಾಫೋಡಿಲ್ಸ್ ಕಾನ್ವೆಂಟ್ ಶಾಲೆಯ ವಿದ್ಯಾರ್ಥಿ ವರುಣ್ 97.8 ಅಂಕಗಳೊಂದಿಗೆ ಕಲ್ಯಾಣ ಕರ್ನಾಟಕ ವಿಭಾಗದಲ್ಲೇ ಟಾಫರ್ ಆಗಿದ್ದಾನೆ ಎಂದು ಶಾಲೆಯ ಆಡಳಿತ ಮಂಡಳಿ ತಿಳಿಸಿದೆ.**




ಈ ಬಾಲಕ ಸಿಂಧನೂರು ತಾಲೂಕಿನ ಗಾಂಧಿನಗರ ಸಮೀಪದ ವೆಂಕಟೇಶ್ವರ ಪೈ ಕ್ಯಾಂಪ್ ನಿವಾಸಿ ಆಗಿದ್ದು, ಪಾಲಕರು ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಉಪ್ಪಲೂರಿ ಮಧು ಮತ್ತು ಪಾವನಿ ದಂಪತಿಗಳ ಮಗನಾಗಿದ್ದು, ಪಾಲಕರು, ಶಾಲೆಯ ಆಡಳಿತ ಮಂಡಳಿ ಹಾಗೂ ಶಿಕ್ಷಕರು, ಸಿಬ್ಬಂದಿ ವರ್ಗದವರು ಹರ್ಷ ವ್ಯಕ್ತಪಡಿಸಿ ಅಭಿನಂದನೆ ತಿಳಿಸಿದ್ದಾರೆ.

## ರಾಜ್ಯಕ್ಕೆ ತೃತೀಯ ಸ್ಥಾನ ಪಡೆದ ಸೌಪರ್ಣಿಕಾಗೆ ಸನ್ಮಾನ



ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ತಾಲೂಕಿನ ಬೇಲೂರ ಕ್ರಾಸ್ ಕೊಡಗಾನೂರದ ಜೆಎಸ್ ಎಸ್ ಪ್ರೌಢಶಾಲೆಯ ವಿದ್ಯಾರ್ಥಿನಿ ಸೌಪರ್ಣಿಕಾ ಸಂಗನಗೌಡ ಪಾಟೀಲ 2025–26ನೇ ಸಾಲಿನ ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ರಾಜ್ಯಕ್ಕೆ ತೃತೀಯ ಸ್ಥಾನ ಪಡೆದುಕೊಂಡ ಹಿನ್ನೆಲೆಯಲ್ಲಿ ಸಂಸ್ಥೆ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು.**

ಏಪ್ರಿಲ್ 27ರಂದು ಶಾಲೆಯಲ್ಲಿ ಹಮ್ಮಿಕೊಂಡ 2025–26 ನೇ ಸಾಲಿನ ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಅತ್ಯುತ್ತಮ ಸಾಧನೆ ತೋರಿದ ಪ್ರತಿಭಾವಂತ ವಿದ್ಯಾರ್ಥಿಗಳ ಸನ್ಮಾನ ಸಮಾರಂಭದಲ್ಲಿ ಅವರಿಗೆ ಈ ಗೌರವ ಸಮರ್ಪಣೆ ಸಲ್ಲಿಸಲಾಯಿತು.ನಾವದಗಿ ಬ್ರಹನ್ಮಠದ ಷ.ಬ್ರ.ಶ್ರೀ ರಾಜ ಗುರು ರಾಜೇಂದ್ರ ಒಡೆಯರ ಶಿವಾಚಾರ್ಯ ಮಹಾಸ್ವಾಮಿಗಳು ಸಾನಿಧ್ಯ ವಹಿಸಿದ್ದರು.

ಈ ಸಮಯದಲ್ಲಿ ಸಂಸ್ಥೆಯ ಅಧ್ಯಕ್ಷರಾದ ಸಿದ್ದನಗೌಡ ಗಬಸಾವಳಗಿ, ಕಾರ್ಯದರ್ಶಿ ಸಾಹೇಬಗೌಡ ಎಸ್.ಗಬಸಾವಳಗಿ,

ಸಿ.ಆರ್.ಸಿ. ಸಂಗಮೇಶ ಪಾಲ್ಕಿ, ಆಂಗ್ಲ ಮಾಧ್ಯಮ ವಿಭಾಗದ ಮುಖ್ಯ ಗುರುಮಾತೆ ವಿಜಯಲಕ್ಷ್ಮಿ ಎಸ್ ಗಬಸಾವಳಗಿ, ಕನ್ನಡ ಮಾಧ್ಯಮ ವಿಭಾಗದ ಮುಖ್ಯೋಪಾಧ್ಯಾಯ ವಿನಾಯಕ ಪಟಗಾರ, ಗಣ್ಯರಾದ ಪ್ರಕಾಶ ನಾಯಕ್,ಮಾದೇವ ತಳವಾರ, ರೇವಣಸಿದ್ದಪ್ಪ ಗುಗ್ರಿ,ಸಂಗನಗೌಡ ಪಾಟೀಲ, ಶಿಕ್ಷಕರಾದ ಸಲೀಮ ಮನಿಯಾರ,ಹಣಮಂತ ಮೇಟಿ,ಸಾಬಣ್ಣ ಸರ್, ಮುತ್ತುರಾಜ ಯಡ್ರಾಮಿ, ಪೋಷಕರು ಹಾಗೂ ವಿದ್ಯಾರ್ಥಿಗಳು ಇದ್ದರು.

## ಗಾಣಧಾಳ ಗ್ರಾಮದಲ್ಲಿ ಕಾರ್ಮಿಕರ ದಿನಾಚರಣೆ

ನೈಜ್ಯ ದೆಸೆ ನ್ಯೂಸ್

**ಅರಕೇರಾ: ಗ್ರಾಕೂಸ್ ಸಂಘಟನೆಯ ವತಿಯಿಂದ ಮೇ 1ರಂದು ಗಾಣಧಾಳ ಗ್ರಾಮದಲ್ಲಿ ಅಂತರರಾಷ್ಟ್ರೀಯ ಕಾರ್ಮಿಕರ ದಿನಾಚರಣೆಯನ್ನು ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಗ್ರಾಮಸ್ಥರು, ಕಾರ್ಮಿಕರು ಹಾಗೂ ಸಂಘಟನೆಯ ಪದಾಧಿಕಾರಿಗಳು ಭಾಗವಹಿಸಿದರು.**



ಈ ಸಂದರ್ಭದಲ್ಲಿ ಆಂಜನೇಯ ಅಬಕಾರಿ, ಈರಣ್ಣ, ಮಹ್ಮದಸಾಬ, ಯಲ್ಲಮ್ಮ, ಹುಸೇನಾ ಬಿ, ಶಿವಮ್ಮ, ಗೌರಮ್ಮ, ಗುಂಡಪ್ಪ ಜಾಕಾ, ಬಾಬು ಶಾವತಂಗೆರಾ, ಬಾಲಯ್ಯ ಕರಿಗುಡ್ಡ, ಶಿವರಾಜ್ ಮತ್ತು ಇತರರು ಇದ್ದರು

## ಶ್ರೀ ಭಗವಾನ್ ಬುದ್ದರ 2570ನೇ ಜಯಂತ್ಯೋತ್ಸವ

ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದ ತಾಲೂಕು ಪಂಚಾಯತ್ ಸಭಾಂಗಣದಲ್ಲಿ ತಾಲೂಕು ಆಡಳಿತ ವತಿಯಿಂದ ನಡೆದ ಶ್ರೀ ಭಗವಾನ್ ಬುದ್ದರ 2570ನೇ ಜಯಂತ್ಯೋತ್ಸವ ಕಾರ್ಯಕ್ರಮವನ್ನು ತಹಶೀಲ್ದಾರ್ ಭೀಮರಾಯ ಬಿ.ರಾಮಸಮುದ್ರ ರವರು ಶ್ರೀ ಬುದ್ದರ ಮೂರ್ತಿಗೆ ಪುಷ್ಪ ಸಮರ್ಪಿಸುವ ಮೂಲಕ ಶ್ರೀ ಭಗವಾನ್ ಬುದ್ದರ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ.**

ಮಾತನಾಡಿ ಈ ಭೂಮಿಯಲ್ಲಿ ಮಾನವನಾಗಿ ದೈವತ್ವವನ್ನು ಸಾರಿದವರು ಶ್ರೀ ಭಗವಾನ್ ಬುದ್ದರು ಅವರು ಸಾರಿದ ಅಹಿಂಸೆ ಹಾಗೂ ಶಾಂತಿಯ ಸಂದೇಶಗಳು ಇಂದು ವಿಶ್ವದಲ್ಲಿನ ವಿವಿಧ ರಾಷ್ಟ್ರಗಳ ನಡುವೆ ನಡೆಯುತ್ತಿರುವ ಯುದ್ದದ ವಾತಾವರಣ–ಕ್ಕೆ ಸೂಕ್ತವಾದ ಸಂದೇಶವನ್ನು ನೀಡುತ್ತಿವೇ. ಡಾ.ಬಿ.ಆರ್.ಅಂಬೇಡ್ಕರ್ ರವರು ಶ್ರೀ ಭಗವಾನ್



ಬುದ್ದರು ಸ್ಥಾಪಿಸಿದ ಬೌದ ಧರ್ಮದಲ್ಲಿನ ಸಮಾನತೆಯ ತತ್ವಗಳಿಂದ ಆರ್ಕರ್ಷಿತರಾಗಿ ಬೌದ ಧರ್ಮವನ್ನು ಒಪ್ಪಿಕೊಂಡು ಸ್ವಿಕಾರ ಮಾಡಿದರು.ಇಂದು ಬುದ್ದರ ಸಂದೇಶಗಳನ್ನು ಮನೆ ಮನೆಗೆ ತಲುಪಿಸುವ ಕಾರ್ಯವನ್ನು ನಾವೇಲ್ಲರು ಮಾಡಬೇಕಾಗಿದೆ ಎಂದು ತಿಳಿಸಿದರು. ಮಾಜಿ ಎ.ಪಿ.ಎಂ.ಸಿ ಸದಸ್ಯರಾದ ಶಿವರಾಜ ನಾಯಕ ಮಾತನಾಡಿ ಸತ್ಯ ಮತ್ತು ಆಹಿಸೆಯನ್ನುಒಳಗೊಂಡ ಪಂಚಶೀಲ ತತ್ವಗಳನ್ನು ಗೌತಮ್ಮ ಬುದ್ದರು ನಮ್ಮಗೆ ಭೋದಿಸಿದ್ದಾರೆ.


ಅವುಗಳನ್ನು ನಾವು ನಿತ್ಯ ನಮ್ಮ ಜೀವನದಲ್ಲಿ ಅಳವಡಿಸಿಕೊಳಬೇಕಾಗಿದೆ ಶಾಂತಿ ಮತ್ತು ಅಹಿಂಸೆಯಿಂದ ಮಾತ್ರ ನಾವು ಜಗತ್ತನ್ನು ಗೇಲವುದಕ್ಕೆ ಸಾಧ್ಯವಾಗುತ್ತದೆ ಎಂದು ತಿಳಿಸಿದರು. ಶಿಕ್ಷಕಿ ಆಶ್ವಿನಿ ಸಂಗಮೇಶ ರವರು ಗೌತಮ್ಮ ಬುದ್ದನ ಜೀವನ ಮತ್ತು ಸಂದೇಶಗಳ ಕುರಿತು ವಿಶೇಷವಾದ ಉಪನ್ಯಾಸವನ್ನು ನೀಡಿದರು. ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಉತ್ತಮ ಸಾಧನೆಯನ್ನು ತೋರಿದ ಸಾಧಕರನ್ನು ತಾಲೂಕು ಆಡಳಿತವತಿಯಿಂದ ಗೌರವಿಸಿ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಗ್ರೇಡ್–2 ತಹಶೀಲ್ದಾರ್ ಅಬ್ದುಲ್ ವಾಹಿದ್, ಪಿ.ಐ. ಸೋಮಶೇಖರ ಎಸ್.ಕೆಂಚರೆಡ್ಡಿ, ಕೃಷಿ ಅಧಿಕಾರಿ ಗುರುನಾಥ ಭೂಸನೂರ್ ಮಠ ಸೇರಿದಂತೆ ಮುಖಂಡರಾದ ಪಿ.ತಿಪ್ಪಣ್ಣ ಬಾಗಲವಾಡ, ಲಕ್ಷ ?ಮಣ ಜಾನೇಕಲ್,ಹನುಮೇಶ ಸೀಕಲ್,ಶಿವರಾಜ ಉಮಳಿಹೊಸೂರು,ದತ್ತಾತ್ರೇಯ ವಕೀಲರು, ಜಿ.ಹನುಮೇಶ ಉದ್ಬಳ್.ಶಿವು ಡೋಣಮರಡಿ, ಮಲ್ಲಿಕಾರ್ಜುನ ಜಾನೆಕಲ್, ರಾಮುಹೊಳೆಯಪ್ಪ , ಸಂಜೀವಪ್ಪ ಸೇರಿದಂತೆ ಇನ್ನಿತರರು ಇದ್ದರು.

## ಇಕ್ರಾ ಉರ್ದು ಪ್ರೌಢಶಾಲೆ ಶೇ.100 ರ ಸಾಧನೆ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಪಟ್ಟಣದ ಇಕ್ರಾ ಉರ್ದು ಪ್ರೌಢಶಾಲೆ 2025–26 ನೇ ಸಾಲಿನ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶೇ.100 ರಷ್ಟು ಸಾಧನೆ ಮಾಡಿದೆ. ವಿದ್ಯಾರ್ಥಿನೀಯರಾದ ನಿಧಾ ಮೋಮಿನ್ 94.88% ಪಡೆದು ಪ್ರಥಮ, ದುರ್ರತುನ್ನಿಸಾ ಮಕಾಂದಾರ 94.40% ಪಡೆದು ದ್ವಿತೀಯ ಹಾಗೂ ಅಂಜುಮ ಪಟೇಲ 92.80% ಪಡೆದು ತೃತಿಯ ಸ್ಥಾನ ಪಡೆದಿದ್ದಾರೆ.**



ಪರೀಕ್ಷೆಗೆ ಹಾಜರಾದ ಎಲ್ಲಾ 23 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಸಂಸ್ಥೆಯ ಅಧ್ಯಕ್ಷ ಜಾವೀದ ಎಂ.ಕೆಂಭಾವಿ, ಶಿಕ್ಷಕ ವೃಂದ ಹಾಗೂ ಸಿಬ್ಬಂದಿ ವರ್ಗ ಅಭಿನಂದಿಸಿದೆ.

## ಅಂಬೇಡ್ಕರ್ ಜಯಂತಿ ಪ್ರಯುಕ್ತ ಅಂಜುಮನ್–ಎ–ಮುಸ್ಲಿಮೀನ್ ವತಿಯಿಂದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನ



ನೈಜ್ಯ ದೆಸೆ ನ್ಯೂಸ್

**ಲಿಂಗಸೂಗೂರ: ಸಂವಿಧಾನ ಶಿಲ್ಪಿ ಬಾಬಾ ಸಾಹೇಬ್ ಡಾ. ಬಿ.ಆರ್. ಅಂಬೇಡ್ಕರ್ ಅವರ ಜಯಂತಿಯ ಅಂಗವಾಗಿ ಅಂಜುಮನ್–ಎ–ಮುಸ್ಲಿಮೀನ್ ಲಿಂಗಸೂಗೂರ ತಾಲೂಕು ಕಮಿಟಿ ಮುದಗಲ್ ಘಟಕದ ವತಿಯಿಂದ ವಿಶೇಷ ಕಾರ್ಯಕ್ರಮವನ್ನು ಆಯೋಜಿಸಲಾಯಿತು.**

ಲಿಂಗಸೂಗೂರ ತಾಲೂಕಿನ ಇತಿಹಾಸದಲ್ಲೇ ಮೊಟ್ಟ ಮೊದಲ ಬಾರಿಗೆ ಎಸ್.ಎಸ್.ಎಲ್.ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಗಳಲ್ಲಿ 85% ಕ್ಕೂ ಅಧಿಕ ಅಂಕಗಳನ್ನು ಪಡೆದ 150 ಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಸನ್ಮಾನಿಸಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳ ಸಾಧನೆಯನ್ನು ಪ್ರಶಂಸಿಸಿ, ಅವರ ಭವಿಷ್ಯಕ್ಕೆ ಶುಭಾಶಯಗಳನ್ನು ತಿಳಿಸಲಾಯಿತು. ಈ ಸಂದರ್ಭದಲ್ಲಿ ಅಂಜುಮನ್ ಲಿಂಗಸೂಗೂರ ತಾಲೂಕು ಕಮಿಟಿಯ ಗೌರವಾಧ್ಯಕ್ಷರಾದ ಅನ್ನರುದ್ದಿನ್ ಸರ್, ತಾಲೂಕು ಅಧ್ಯಕ್ಷರಾದ ಹುಸೇನ ಭಾಷಾ, ತಾಲೂಕು ಕಾರ್ಯಕಾರಿ ಸಮಿತಿ ಸದಸ್ಯರಾದ ರಹೀಮ್ ಶಾ ಮಕಾನದಾರ್, ಮಿರು ಹುಸೇನ್, ಸಲೀಂ ಪಾಷಾ, ಶೇಖ್ ಅಬ್ದುಲ್ಲಾ, ಉಬೇಡ ಚೌದ್ರಿ, ಇಬ್ರಾಹಿಂ ಖುರೇಶಿ, ಮಹ್ಮದ್ ರಫಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಮುದಗಲ್ ಘಟಕದ ಅಧ್ಯಕ್ಷರಾದ ಮಹ್ಮದ್ ರಸೂಲ್, ಉಪಾಧ್ಯಕ್ಷರಾದ ಅಬ್ಬಾಸ್ ಪಾಷಾ, ಪ್ರಧಾನ ಕಾರ್ಯದರ್ಶಿಯಾದ ಅಸ್ಲಾಂ ಡೊಯಿ, ಖಜಾಂಚಿಯಾದ ಆರಿಫ್ ಡೊಂಗ್ರಿ, ಕಾರ್ಯಾಧ್ಯಕ್ಷರಾದ ಹುಸೇನ್ ಭಾಷಾ, ಜಂಟಿ ಕಾರ್ಯದರ್ಶಿಯಾದ ಯಾಸಿನ್ ಪಾನ್ ವಾಲೆ, ಸಹಕಾರ್ಯದರ್ಶಿಯಾದ ಅಬ್ರಾರ್ ಹಾಗೂ ಸದಸ್ಯರಾದ ಮೈಬುಬ್, ಶಾಹಿದ್, ರಾಜಮಹ್ಮದ್, ಖಾಸಿಂ ಅಲಿ ಡೊಂಗ್ರಿ, ಭಾಷಾ, ಜಿಲಾನಿ ಪಾಷಾ ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ಸಮಾಜ ಸೇವಕರಾದ ಹಾಜಿಬಾಬಾ ಕರಡಕಲ್, ನಿವೃತ್ತ ಪಬ್ಲಿಕ್ ಪ್ರಾಸಿಕ್ಯೂಟರ್ ಶಫಿರ್ ಅಹ್ಮದ್ ಸಾಬ್ ಹಾಗೂ ಅಪಾರ ಪ್ರಮಾಣದ ವಿದ್ಯಾರ್ಥಿ–ವಿದ್ಯಾರ್ಥಿನಿಯರು ಮತ್ತು ಮುದಗಲ್ ಪಟ್ಟಣದ ಜನತೆ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ಈ ಕಾರ್ಯಕ್ರಮವು ವಿದ್ಯಾರ್ಥಿಗಳಲ್ಲಿ ಉತ್ತೇಜನವನ್ನು ಹೆಚ್ಚಿಸಿ, ಶಿಕ್ಷಣದ ಮಹತ್ವವನ್ನು ಅರಿವು ಮೂಡಿಸುವಲ್ಲಿ ಪ್ರಮುಖ ಪಾತ್ರವಹಿಸಿದೆ.

## ಲೋಕಮಾತೆ ಮಹಾಲಕ್ಷ್ಮಿ ದೇವಿ ದ್ವಾರ ಬಾಗಿಲು ಲೋಕಾರ್ಪಣೆ

ನೈಜ್ಯ ದೆಸೆ ನ್ಯೂಸ್

**ಅಫಜಲಪೂರ: ಮತಕ್ಷೇತ್ರದ ಹಿಂಚೇಗೇರಾ ಗ್ರಾಮದಲ್ಲಿ, ಗ್ರಾಮ ದೇವತೆ ಶ್ರೀ ಮಹಾಲಕ್ಷ್ಮೀ ದೇವಿಯ ಮಹಾದ್ವಾರದ ಲೋಕಾರ್ಪಣೆ ಕಾರ್ಯಕ್ರಮ ಅದ್ದೂರಿಯಾಗಿ ಜರುಗಿತು.ಕಾರ್ಯಕ್ರಮದ ದಿವ್ಯ ಸಾನಿಧ್ಯದಲ್ಲಿ ವಿಶ್ವಾರಾಧ್ಯ ಮಳೇಂದ್ರ ಶಿವಾಚಾರ್ಯರು ಹಾಗೂ ಗ್ರಾಮಸ್ಥರ ಭಕ್ತಿಭಾವಪೂರ್ಣ ಉಪಸ್ಥಿತಿಯಲ್ಲಿ ಮಹಾದ್ವಾರದ ಉದ್ಘಾಟನೆ ಸಮಾರಂಭವು ಭಕ್ತಿ ಶ್ರದ್ಧೆಯಿಂದ ನೆರವೇರಿತು.**

ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಕೆಕೆಆರಟಿಸಿ ಅಧ್ಯಕ್ಷ ಅರುಣಕುಮಾರ ಪಾಟೀಲ ನಮ್ಮ ಆತ್ಮೀಯರು, ಅಫಜಲಪೂರ ಬ್ಲಾಕ್ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಗಳಾದ ಶರಣು



ಕುಂಬಾರ ಹಾಗೂ ಅವರ ಸಹೋದರರಾದ ಲಕ್ಷ್ಮಿಪುತ್ರ ಕುಂಬಾರವರು, ತಮ್ಮ ಸ್ವಂತ ಖರ್ಚಿನಲ್ಲಿ ಗ್ರಾಮದ ಅಧಿದೇವತೆ ಶ್ರೀ ಮಹಾಲಕ್ಷ್ಮೀ ದೇವಿಯ ಮಹಾದ್ವಾರವನ್ನು ನಿರ್ಮಿಸಿರುವುದು ನಿಜಕ್ಕೂ ಶ್ಲಾಘನೀಯ, ಆದರ್ಶಪ್ರಾಯ ಹಾಗೂ ಸಮಾಜಮುಖಿ ಸೇವಾಕಾರ್ಯವಾಗಿದೆ. ಧರ್ಮ, ಸಂಸ್ಕೃತಿ, ಭಕ್ತಿ ಮತ್ತು ಸಮಾಜಸೇವೆಯ ಅಪೂರ್ವ ಸಂಗಮವಾಗಿರುವ ಈ ಕಾರ್ಯವು ಗ್ರಾಮಸ್ಥರಲ್ಲಿ ಆಧ್ಯಾತ್ಮಿಕ ಚೈತನ್ಯ ಮೂಡಿಸುವುದರ ಜೊತೆಗೆ, ಮುಂದಿನ ಪೀಳಿಗೆಗೆ ನಮ್ಮ ಪರಂಪರೆ ಮತ್ತು ಮೌಲ್ಯಗಳ ಮಹತ್ವವನ್ನು ಸಾರುವ ದಾರಿದೀಪವಾಗಿದೆ.

ಇಂತಹ ಪುಣ್ಯಕಾರ್ಯಕ್ಕೆ ಕೈಜೋಡಿಸಿದ ಶರಣು ಕುಂಬಾರ ಸಹೋದರರು ಸೇವಾಭಾವ, ದೈವಭಕ್ತಿ ಮತ್ತು ಸಮಾಜದ ಮೇಲಿನ ಕಾಳಜಿ ನಿಜಕ್ಕೂ ಅನುಕರಣೀಯವಾಗಿದೆ. ಅವರ ಈ ಮಹತ್ತರ ಕೊಡುಗೆಯನ್ನು ಹೃತ್ಪೂರ್ವಕವಾಗಿ ಅಭಿನಂದಿಸಿ, ಗೌರವಪೂರ್ವಕವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ ಎಂದರು.ದೈವಿಶಕ್ತಿಯ ಭಾವ ಎಲ್ಲಿ ಅಡಗಿರುತ್ತದೆಯೋ ಅಲ್ಲಿ ಶಾಂತಿ ನೆಮ್ಮದಿಯ ಬದುಕು ನೆಲೆಸುತ್ತದೆ ಎಂದರು. ನಂತರ ಪಿಯುಸಿ ಮತ್ತು ಎಸ್ ಎಸ್ ಎಲ್ ಸಿ ಎಲ್ಲಿ ಅತಿ ಹೆಚ್ಚು ಅಂಕ ಗಳಿಸಿ ಸಾಧನೆಗೈದ ಸ್ವ–ಗ್ರಾಮದ ವಿದ್ಯಾರ್ಥಿಗಳಿಗೆ ಸನ್ಮಾನಿಸಲಾಯಿತು.

ಈ ಸಂಧರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಮೇಶ ಪೂಜಾರಿ, ಪ್ರ.ಕಾರ್ಯದರ್ಶಿ ಶಿವಾನಂದ ಗಾಡಿ ಸಾಹುಕಾರ ಮಾಜಿ ತಾಲೂಕ ಪಂಚಾಯತ್ ಸದಸ್ಯ ಸುಭಾಷ ರೋಗಿ, ಮಾಜಿ ಗ್ರಾಮ ಪಂಚಾಯತ್ ಸದಸ್ಯ ಕಲ್ಯಾಣಿ ಸಿಂದಗೇರಿ, ಮಕ್ತುಂ ಪಟೇಲ್, ವಿಠ್ಠಲ ನಾಟಿ–ಕರ,ಶರಣು ಈಶ್ವರಗೊಂಡ, ಸಾತಲಿಂಗಪ್ಪ ಧಸ್ಮ ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### B.Tech (ECE)

B.Tech (ECE) Jಂಬುದು 4 ವರ್ಷಗಳ ಎಂಜಿನಿಯರಿಂಗ್ ಪದವಿಯಾಗಿದ್ದು, ಎಲೆಕ್ಟ್ರಾನಿಕ್ ಸರ್ಕ್ಯೂಟ್‌ಗಳು, ಸಂವಹನ ವ್ಯವಸ್ಥೆಗಳು (Communication systems), ಮತ್ತು ಸಂಕೇತ ಸಂಸ್ಕರಣೆ (Signal processing) ಬಗ್ಗೆ ತಿಳಿಸುತ್ತದೆ. ಇದು ಕನ್ನಡದಲ್ಲಿ ಎಲೆಕ್ಟ್ರಾನಿಕ್ಸ್ ಮತ್ತು ಸಂವಹನ ಎಂಜಿನಿಯರಿಂಗ್ ಎಂದೇ ಪ್ರಸಿದ್ಧವಾಗಿದೆ. ಇದು 8 ಸೆಮಿಸ್ಟರ್‌ಗಳನ್ನು ಹೊಂದಿದ್ದು, ಡಿಜಿಟಲ್ ಎಲೆಕ್ಟ್ರಾನಿಕ್ಸ್, ಗಿಐಖಿಟ, ಮತ್ತು ಸಂವಹನ ತಂತ್ರಜ್ಞಾನಗಳ ಮೇಲೆ ಕೇಂದ್ರೀಕರಿಸುತ್ತದೆ.ಬಿ.ಟೆಕ್ ಇಸಿಇ (B.Tech ECE) ಕೋರ್ಸ್ ವಿವರಗಳು:ಅರ್ಹತೆ (Eligibility): ದ್ವಿತೀಯ ಪಿಯುಸಿ ಅಥವಾ 12ನೇ ತರಗತಿಯಲ್ಲಿ ಭೌತಶಾಸ್ತ್ರ (Physics), ರಸಾಯನಶಾಸ್ತ್ರ (Chemistry), ಮತ್ತು ಗಣಿತ (Mathematics - PCM) ವಿಷಯಗಳೊಂದಿಗೆ ಉತ್ತೀರ್ಣರಾಗಿರಬೇಕು.ಪ್ರವೇಶ ಪರೀಕ್ಷೆಗಳು: ಕರ್ನಾಟಕದಲ್ಲಿ KCET, COMEDK, ಅಥವಾ ರಾಷ್ಟ್ರಮಟ್ಟದಲ್ಲಿ JEE Main.ಅವಧಿ (Duration): 4 ವರ್ಷಗಳು (8 ಸೆಮಿಸ್ಟರ್‌ಗಳು).ಮುಖ್ಯ ವಿಷಯಗಳು ಅನಲಾಗ್ ಮತ್ತು ಡಿಜಿಟಲ್ ಎಲೆಕ್ಟ್ರಾನಿಕ್ಸ್ (Analog & Digital Electronics)ಸಿಗ್ನಲ್ಸ್ ಮತ್ತು ಸಿಸ್ಟಮ್ಸ್ (Signals & Systems)ಸಂವಹನ ವ್ಯವಸ್ಥೆಗಳು (Communication Systems)VLSI ಮತ್ತು ಎಂಬೆಡೆಡ್ ಸಿಸ್ಟಮ್ಸ್ (Embedded Systems)ಮೈಕ್ರೊಕಂಟ್ರೋಲರ್‌ಗಳು (Microcontrollers)ಕೌಶಲ್ಯಗಳು: C, Python, MATLAB ನಂತಹ ಪ್ರೋಗ್ರಾಮಿಂಗ್ ಭಾಷೆಗಳ ಜ್ಞಾನ.ವೃತ್ತಿ ಅವಕಾಶಗಳು (Career Options) – ಕನ್ನಡದಲ್ಲಿ: ಉದ್ಯೋಗಗಳು: ಎಲೆಕ್ಟ್ರಾನಿಕ್ಸ್ ಎಂಜಿನಿಯರ್, ನೆಟ್‌ವರ್ಕ್ ಪ್ಲಾನಿಂಗ್ ಎಂಜಿನಿಯರ್, ಎಂಬೆಡೆಡ್ ಸಿಸ್ಟಮ್ಸ್ ಡೆವಲಪರ್.ಉದ್ಯೋಗ ನೀಡುವ ವಲಯಗಳು: ಟೆಲಿಕಾಂ (Jio, Airtel), ಡಿಫೆನ್ಸ್ (DRDO), ಐಟಿ ಕಂಪನಿಗಳು, ಮತ್ತು ಉತ್ಪಾದನಾ ಸಂಸ್ಥೆಗಳು. ವೇತನ: ಬೆಂಗಳೂರಿನಲ್ಲಿ ಫ್ರೆಶರ್‌ಗಳಿಗೆ ಅಂದಾಜು ?3.4 ಲಕ್ಷದಿಂದ 11 ಲಕ್ಷದವರೆಗೆ ವಾರ್ಷಿಕ ವೇತನ ಸಿಗಬಹುದು. ಏಕೆ ಈ ಕೋರ್ಸ್ ಆರಿಸಬೇಕು:ಈ ಕೋರ್ಸ್ ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್ ಎರಡರಲ್ಲೂ ಜ್ಞಾನವನ್ನು ನೀಡುತ್ತದೆ. ಟೆಲಿಕಾಂ, 5G, ಮತ್ತು IoT (Internet of Things) ಕ್ಷೇತ್ರಗಳಲ್ಲಿ ಭಾರಿ ಬೇಡಿಕೆಯಿದೆ.ಇದು ಖಾಸಗಿ ಮತ್ತು ಸರ್ಕಾರಿ ಉದ್ಯೋಗಗಳೆರಡರಲ್ಲೂ ಅವಕಾಶಗಳನ್ನು ಒದಗಿಸುತ್ತದೆ.

## ಭಕ್ತಿಭಾವ ತುಂಬಿದ ಅನುಕೃಪ ಗಾಯನ

ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ತ್ಯಾಗರಾಜನಗರದ ಶ್ರೀ ಅಭಯ ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನ ವಜ್ರಕ್ಷೇತ್ರದಲ್ಲಿ ಜರುಗುತ್ತಿರುವ ಶ್ರೀ ನರಸಿಂಹ ಜಯಂತ್ಯೋತ್ಸವದ ಅಂಗವಾಗಿ ಏರ್ಪಡಿಸಿದ್ದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ವಿದುಷಿ ಶ್ರೀಮತಿ ಅನುಕೃಪ ಪುರೋಹಿತ್ ಅವರು ಅಪರೋಕ್ಷ ಜ್ಞಾನಿಗಳಿಂದ ರಚಿಸಲ್ಪಟ್ಟ ಹಲವಾರು ಅಪರೂಪದ ಹರಿದಾಸರ ಪದಗಳನ್ನು ಹಾಗೂ ಅನ್ನಮಾಚಾರ್ಯರ ಕೀರ್ತನೆಗಳನ್ನು ತಾರತಮ್ಯೋಕ್ತವಾಗಿ ಮತ್ತು ಸುಶ್ರಾವ್ಯವಾಗಿ ಹಾಡಿದರು.**



ಇವರ ಗಾಯನಕ್ಕೆ ಕೀಬೋರ್ಡ್ ವಾದನದಲ್ಲಿ ಶ್ರೀ ಟಿ.ಎಸ್. ರಮೇಶ್ ಮತ್ತು ತಬಲಾ ವಾದನದಲ್ಲಿ ಶ್ರೀ ಪ್ರಮಥ್ ವಿಠಲ್ ಸಾಥ್ ನೀಡಿದರು. ದೇವಸ್ಥಾನದ ಪ್ರಧಾನ ಅರ್ಚಕರಾದ ಡಾ॥ ವಾದಿರಾಜಾಚಾರ್ ಮತ್ತು ಸಹ–ಅರ್ಚಕರಾದ ಶ್ರೀ ನರಹರಿ ಆಚಾರ್ ಕಲಾವಿದರಿಗೆ ಸ್ವಾಮಿಯ ಪ್ರಸಾದ ಮತ್ತು ಸರ್ಟಿಫಿಕೇಟ್ ನೀಡಿ ಆಶೀರ್ವದಿಸಿದರು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

ಮಟ್ಟೂರು ಗ್ರಾಮ ಪಂಚಾಯತಿಯ ಗುಡಿಹಾಳನಲ್ಲಿ ನರೇಗಾ ಕಾಮಗಾರಿ ಸ್ಥಳದಲ್ಲಿ ವಿಶ್ವ ಕಾರ್ಮಿಕರ ದಿನಾಚರಣೆ

# ದೇಶ ನಿರ್ಮಾಣದಲ್ಲಿ ಕಾರ್ಮಿಕರ ಪಾತ್ರ ದೊಡ್ಡದು: ಅಮರೇಶ ಯಾದವ

ನೈಜ್ಯ ದೆಸೆ ನ್ಯೂಸ್

**ಮಸ್ಕಿ: ದೇಶ ನಿರ್ಮಾಣದಲ್ಲಿ ಕಾರ್ಮಿಕರ ಪಾತ್ರ ನಿರ್ಣಾಯಕವಾಗಿದ್ದು, ಅವರ ಕೊಡುಗೆ ಸ್ಮರಿಸುವ ಉದ್ದೇಶದಿಂದ ಪ್ರತಿ ವರ್ಷ ಧ್ಯೇಯ ವಾಕ್ಯದೊಂದಿಗೆ ಕಾರ್ಮಿಕರ ದಿನ ಆಚರಿಸಲಾಗುತ್ತದೆ ಎಂದು ಮಸ್ಕಿ ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಅಮರೇಶ ಯಾದವ ಹೇಳಿದರು. ಮಸ್ಕಿ ತಾಲೂಕಿನ ಮಟ್ಟೂರು ಗ್ರಾಮ ಪಂಚಾಯತಿಯ ಗುಡಿಹಾಳ ಗ್ರಾಮದ ಕೆರೆ ಹೂಳು ಎತ್ತುವ ನರೇಗಾ ಕಾಮಗಾರಿ ಸ್ಥಳದಲ್ಲಿ ಶುಕ್ರವಾರ ಏರ್ಪಡಿಸಿದ್ದ ವಿಶ್ವ ಕಾರ್ಮಿಕರ ದಿನಾಚರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.**

ಕಾರ್ಮಿಕರ ಹಕ್ಕು, ಕೆಲಸದ ಸ್ಥಳಗಳಲ್ಲಿ ಇರಬೇಕಾದ ಸೌಕರ್ಯ, ನಿವೃತ್ತಿ ಜೀವನಕ್ಕೆ ಬೇಕಾದ ಸವಲತ್ತುಗಳನ್ನು ಪಡೆಯಲು ಕಾರ್ಮಿಕರಲ್ಲಿ ಜಾಗೃತಿ ಮೂಡಿಸುವ ಉದ್ದೇಶದೊಂದಿಗೆ ವಿಶ್ವಾದ್ಯಂತ ಕಾರ್ಮಿಕರ ದಿನ ಆಚರಿಸಲಾಗುತ್ತಿದೆ. ಭಾರತ ದೇಶ ಅತಿ ಹೆಚ್ಚು ಮಾನವ ಸಂಪನ್ಮೂಲ ಹೊಂದಿದ್ದು,



ಎಲ್ಲರೂ ಅಭಿವೃದ್ಧಿ ಗಾಗಿ ಕೈ ಜೋಡಿಸಿದರೆ, ದೇಶಕ್ಕೆ ಸೃಜನಾತ್ಮಕ ಕೊಡುಗೆ ನೀಡಿದಂತಾಗುತ್ತದೆ. ಒಂದು ದೇಶದ ಭವಿಷ್ಯ ಅಲ್ಲಿಯ ಕಾರ್ಮಿಕರನ್ನು ಅವಲಂಬಿಸಿರುತ್ತದೆ. ದೇಶದ ಅನೇಕ ಪ್ರತಿಭಾವಂತ ನೌಕರರು, ಕಾರ್ಮಿಕರು ಇಂದು ವಿದೇಶಗಳಲ್ಲಿ ಬದುಕು ಕಟ್ಟಿಕೊಂಡಿದ್ದಾರೆ. ಗುಳೆ ತಪ್ಪಿಸುವ ಉದ್ದೇಶದಿಂದ ಜಾರಿಗೊಳಿಸಿದ ನರೇಗಾ ಯೋಜನೆಯಿಂದಾಗಿ ಇಂದು ಅನೇಕರು ಸ್ವಂತ ಊರುಗಳಲ್ಲಿಯೇ ಬದುಕು ಕಟ್ಟಿಕೊಂಡಿದ್ದಾರೆ. ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸ ಒದಗಿಸಿ, ಅವರ ಭವಿಷ್ಯ ರೂಪಿಸಬೇಕು. ಬಿಸಿಲಿನ ಝಳ ಹೆಚ್ಚುತ್ತಿದ್ದು, ಆರೋಗ್ಯದ ಕಡೆ ಮುಂಜಾಗ್ರತೆ ವಹಿಸಬೇಕು ಎಂದರು. ಮಸ್ಕಿ ತಾಪಂ ಸಹಾಯಕ ನಿರ್ದೇಶಕರಾದ (ಪಂ.ರಾ) ಸೋಮನಗೌಡ ಪಾಟೀಲ್ ಮಾತನಾಡಿ, ನರೇಗಾ ಯೋಜನೆಯಡಿ ಸಮಾನ ಕೆಲಸಕ್ಕೆ ಸಮಾನ ವೇತನ ಒದಗಿಸುತ್ತಿದ್ದು, ಎಲ್ಲರೂ ಸಕ್ರಿಯವಾಗಿ ತೊಡಗಬೇಕು. ಅಳತೆ ಅನುಸಾರ ಕೆಲಸ ಮಾಡಿದಾಗ ಹೆಚ್ಚಿನ ಕೂಲಿ ದೊರೆಯುತ್ತದೆ.

ಕೆಲಸದ ಜೊತೆಗೆ ಆರೋಗ್ಯದ ಕಡೆಗೂ ಗಮನಹರಿಸಬೇಕು ಎಂದು ಸಲಹೆ ನೀಡಿದರು. ಮಟ್ಟೂರು ಗ್ರಾಪಂ ಅಭಿವೃದ್ಧಿ ಅಧಿಕಾರಿಗಳಾದ ತಿಮ್ಮನಗೌಡ ಮಾತನಾಡಿದರು. ಹಿರಿಯ ಮಹಿಳಾ ಮತ್ತು ಪುರುಷ ಕೂಲಿಕಾರರನ್ನು ಸನ್ಮಾನಿಸಲಾಯಿತು. ಕೂಲಿಕಾರರೊಂದಿಗೆ ಕೇಕ್ ಕತ್ತರಿಸಿ ಸಂಭ್ರಮಿಸಲಾಯಿತು. ಮಸ್ಕಿ ತಾಪಂ ಐಇಸಿ ಸಂಯೋಜಕರಾದ ಸತೀಶ್, ಬಿಎಫ್ಟಿ ಮಹಾಂತೇಶ್, ಮೇಟಿಗಳು ಇದ್ದರು. ಅದೇ ರೀತಿ ವಿವಿಧ ಗ್ರಾಮ ಪಂಚಾಯತಿಗಳ ನರೇಗಾ ಕಾಮಗಾರಿ ಸ್ಥಳಗಳಲ್ಲಿ ವಿಶ್ವ ಕಾರ್ಮಿಕರ ದಿನ ಆಚರಿಸಿ, ಹಿರಿಯ ಕೂಲಿಕಾರರನ್ನು ಸನ್ಮಾನಿಸಲಾಯಿತು.

# ಡಾ.ವಿಜಯಚಂದ್ರಶೇರ ಕಣ್ಣಿನ ಆಸ್ಪತ್ರೆಯಲ್ಲಿ ಕಾರ್ಮಿಕ ದಿನಾಚರಣೆ ಪ್ರಯುಕ್ತ ಉಚಿತ ತಪಾಸಣೆ



ನೈಜ್ಯ ದೆಸೆ ನ್ಯೂಸ್

ಮೇ 1 ಕಾರ್ಮಿಕರ ದಿನಾಚರಣೆಯ ಅಂಗವಾಗಿ ನಗರದ ಡಾ.ವಿಜಯಚಂದ್ರಶೇಖರ



ಕಣ್ಣಿನ ಆಸ್ಪತ್ರೆಯಲ್ಲಿ ಕಾರ್ಮಿಕರಿಗೆ ಉಚಿತವಾಗಿ ಕಣ್ಣಿನ ತಪಾಸಣೆ ನಡೆಯಿತು. ಅಂಗನವಾಡಿ ಫೆಡರೇಶನ್ ಜಿಲ್ಲಾಧ್ಯಕ್ಷೆ ಸುಲೋಚನ ಮಾತನಾಡಿ, ಇವತ್ತು ಕಾರ್ಮಿಕರ ದಿನಾಚರಣೆ ಆಗಿದ್ದರಿಂದ ಎಲ್ಲಾ ಬಡ ಕಾರ್ಮಿಕರಿಗೆ ಡಾ.ವಿಜಯದ್ರಶೇಖರ ಕಣ್ಣಿನ ಆಸ್ಪತ್ರೆಯಲ್ಲಿ ಉಚಿತವಾಗಿ ಕಣ್ಣಿನ ತಪಾಸಣೆ ನಡೆಸಿ, ಹಾಗೆ ಮೆಡಿಕಲ್ ನಲ್ಲಿ ಮಾತ್ರೆಗಳಾಗಲಿ ಹಾಗೂ ಇನ್ನಿತರೆ ಸಂಬಂಧಪಟ್ಟ ಔಷಧಿಗಳಿಗೆ ಡಿಸ್ಕೌಂಟ್ ಕೊಡುವ ಮೂಲಕ ಅನುಕೂಲ ಕಲ್ಪಿಸಿಕೊಟ್ಟಿದ್ದಾರೆ ಎಂದರು. ಈ ಸಂದರ್ಭದಲ್ಲಿ: ಅಂಗನವಾಡಿ ತಾಲೂಕು ಅಧ್ಯಕ್ಷೆ ಗಿರಿಜಮ್ಮ, ತಾಲೂಕು ಕಾರ್ಯದರ್ಶಿ ಆದಿಲಕ್ಷ್ಮಿ, ತಾಲೂಕು ಸದಸ್ಯೆ ಶಾಂತಮ್ಮ, ಇದ್ದರು.

# ಮಾನ್ವಿಯಲ್ಲಿ ತಾಲೂಕು ಆಡಳಿತದಿಂದ ಬುದ್ಧ ಜಯಂತಿ ಆಚರಣೆ

ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದ ತಾಲೂಕು ಪಂಚಾಯತ್ ಸಭಾಂಗಣದಲ್ಲಿ ತಾಲೂಕು ಆಡಳಿತ ವತಿಯಿಂದ ಹಮ್ಮಿಕೊಂಡಿದ್ದ ಭಗವಾನ್ ಬುದ್ಧರ 2570ನೇ ಜಯಂತ್ಯೋತ್ಸವ ಕಾರ್ಯಕ್ರಮವನ್ನು ತಹಸಿಲ್ದಾರ್ ಭೀಮರಾಯ್ ಬಿ ರಾಮಸಮುದ್ರ ಉದ್ಘಾಟಿಸಿ ಮಾತನಾಡಿ, "ಈ ಭೂಮಿಯಲ್ಲಿ ಮಾನವನಾಗಿ ದೈವತ್ವವನ್ನು ಸಾರಿದವರು ಬುದ್ಧರು.**

ಅವರು ಸಾರಿದ ಅಹಿಂಸೆ ಮತ್ತು ಶಾಂತಿಯ ಸಂದೇಶಗಳು ಇಂದಿನ ವಿಶ್ವದಲ್ಲಿ ನಡೆಯುತ್ತಿರುವ ಯುದ್ಧದ ವಾತಾವರಣಕ್ಕೆ ಸೂಕ್ತವಾದ ದಾರಿ ತೋರಿಸುತ್ತವೆ. 2500 ವರ್ಷಗಳಾದರೂ ಇಂದು ನಾವು ಅವರನ್ನು ನೆನಪಿಸುತ್ತಿದ್ದೇವೆ ಎಂದರೆ, ಅವರ ಮಹಾನ್ ಕಾರ್ಯಗಳ ಮಹತ್ವ ಸ್ಪಷ್ಟವಾಗುತ್ತದೆ. ಯುದ್ಧ ಬೇಡ, ಬುದ್ಧ ಬೇಕು ಎಂಬ ಸಂದೇಶವನ್ನು ನಾವು ಅಳವಡಿಸಿಕೊಳ್ಳಬೇಕು" ಎಂದು ಹೇಳಿದರು. ಡಾ. ಬಿ.ಆರ್. ಅಂಬೇಡ್ಕರ್ ಬುದ್ಧರು ಸ್ಥಾಪಿಸಿದ




ಬೌದ್ಧ ಧರ್ಮದ ಸಮಾನತೆಯ ತತ್ವಗಳಿಂದ ಆಕರ್ಷಿತರಾಗಿ ಅದನ್ನು ಸ್ವೀಕರಿಸಿದ ವಿಚಾರವನ್ನು ಉಲ್ಲೇಖಿಸಿದ ಅವರು, ಬುದ್ಧರ ಸಂದೇಶಗಳನ್ನು ಮನೆ ಮನೆಗೆ ತಲುಪಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದು ತಿಳಿಸಿದರು.

ಮಾಜಿ ಎಪಿಎಂಸಿ ಸದಸ್ಯ ಶಿವರಾಜ್ ನಾಯಕ ಬಲ್ಲಟಗಿ ಮಾತನಾಡಿ, ಸತ್ಯ ಮತ್ತು ಅಹಿಂಸೆಯನ್ನು ಒಳಗೊಂಡ ಪಂಚಶೀಲ ತತ್ವಗಳನ್ನು ಗೌತಮ ಬುದ್ಧರು ಬೋಧಿಸಿದ್ದು, ಅವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ಶಾಂತಿ ಮತ್ತು ಸಮಾನತೆ ಸಾಧ್ಯ ಎಂದು ಹೇಳಿದರು. ಈ ಸಂದರ್ಭದಲ್ಲಿ ಶಿಕ್ಷಕಿ ಅಶ್ವಿನಿ ಸಂಗಮೇಶ್ ಮುಧೋಳ ವಿಶೇಷ ಉಪನ್ಯಾಸ ನೀಡಿ, ಬುದ್ಧರ ಜೀವನ ಹಾಗೂ ತತ್ವಗಳು ಮಾನವೀಯ ಮೌಲ್ಯಗಳನ್ನು ಬಲಪಡಿಸುವುದಾಗಿ ವಿವರಿಸಿದರು. ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಉತ್ತಮ ಸಾಧನೆ ಮಾಡಿದ ಸಾಧಕರನ್ನು ತಾಲೂಕು ಆಡಳಿತದಿಂದ ಗೌರವಿಸಿ ಸನ್ಮಾನಿಸಲಾಯಿತು.

ಜೊತೆಗೆ ಬೌದ್ಧ ಧರ್ಮದ ವಿಧಾನದಲ್ಲಿ ವಿವಾಹವಾದ ಜೋಡಿಗಳಿಗೆ ಸನ್ಮಾನ ಮಾಡಲಾಯಿತು. ಕಾರ್ಯಕ್ರಮದಲ್ಲಿ ಗ್ರೇಡ್–2 ತಹಸಿಲ್ದಾರ್ ಅಬ್ದುಲ್ ವಾಹಿದ್, ಪಿ.ಐ. ಸೋಮಶೇಖರ ಎಸ್. ಕೆಂಚರೆಡ್ಡಿ, ಕೃಷಿ ಅಧಿಕಾರಿ ಗುರುನಾಥ ಭೂಸನೂರ್ ಮಠ, ಮುಖಂಡರಾದ ತಿಪ್ಪಣ್ಣ ಬಾಗಲವಾಡ, ಲಕ್ಷ್ಮಣ ಜಾನೇಕಲ್, ಹನುಮೇಶ ಸೀಕಲ್, ಶಿವರಾಜ ಉಮಳಿಹೊಸೂರು, ದತ್ತಾತ್ರೇಯ ವಕೀಲರು, ಹನುಮೇಶ ಉದ್ಬಳ್, ಶಿವು ಡೋಣಮರಡಿ, ಮಲ್ಲಿಕಾರ್ಜುನ ಜಾನೇಕಲ್, ರಾಮು ಹೊಳೆಪ್ಪ, ಸಂಜೀವಪ್ಪ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಚೀಕಲಪರ್ವಿ ರಸ್ತೆ ಕಾಮಗಾರಿಯಲ್ಲಿ ಗುಣಮಟ್ಟ ಪ್ರಶ್ನೆ: ಲೋಕಾಯುಕ್ತರಿಗೆ ದೂರು

ನೈಜ್ಯ ದೆಸೆ ನ್ಯೂಸ್

**ಮಾನ್ವಿ: ತಾಲ್ಲೂಕಿನ ಚೀಕಲಪರ್ವಿ ಗ್ರಾಮದಲ್ಲಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ (KKRDB) ಮೂಲಕ ಕೈಗೊಳ್ಳಲಾದ ರಸ್ತೆ ಕಾಮಗಾರಿಯಲ್ಲಿ ಗುಣಮಟ್ಟದ ಬಗ್ಗೆ ಗಂಭೀರ ಅನುಮಾನಗಳು ವ್ಯಕ್ತವಾಗಿರುವ ಹಿನ್ನೆಲೆಯಲ್ಲಿ, ದಲಿತ ಸೇನೆ ರಾಜ್ಯ ಸಂಘಟನಾ ಕಾರ್ಯದರ್ಶಿ ಡಾ. ಜಾವೀದ್ ಖಾನ್ ಅವರು ಕರ್ನಾಟಕ ಲೋಕಾಯುಕ್ತರಿಗೆ ದೂರು**




**ಸಲ್ಲಿಸಿ ತನಿಖೆ ನಡೆಸುವಂತೆ ಆಗ್ರಹಿಸಿದ್ದಾರೆ.**

ಸಂಬಂಧಪಟ್ಟ ಅಧಿಕಾರಿಗಳಿಗೆ ದೂರು ನೀಡಿದರೂ, ಕೆಲವು ಸಿಬ್ಬಂದಿಗಳು ಕಾಮಗಾರಿಯನ್ನು "ಉತ್ತಮ" ಎಂದು ವರದಿ ನೀಡಿರುವುದು ಗಮನಕ್ಕೆ ಬಂದಿದೆ ಎಂದು ತಿಳಿಸಿದ್ದಾರೆ. ಈ ಕಾಮಗಾರಿಯಲ್ಲಿ ಗುಣಮಟ್ಟದ ಕೊರತೆ ಇರುವ ಸಾಧ್ಯತೆ ಇರುವುದಾಗಿ ಸ್ಥಳೀಯರು ಹಾಗೂ ಪ್ರಾಥಮಿಕ ಪರಿಶೀಲನೆಯಿಂದ ಕಂಡುಬಂದಿದ್ದು, ಸಾರ್ವಜನಿಕ ಹಣ ಬಳಸಿಕೊಂಡಿರುವ ಹಿನ್ನೆಲೆಯಲ್ಲಿ ಯಾವುದೇ ಅಕ್ರಮ ಅಥವಾ ನಿರ್ಲಕ್ಷ್ಯ ನಡೆದಿದ್ದರೆ ಅದನ್ನು ಬಹಿರಂಗಪಡಿಸಬೇಕೆಂದು ಮನವಿ ಮಾಡಲಾಗಿದೆ.

ಈ ವಿಷಯದಲ್ಲಿ ಸ್ವತಂತ್ರ ಹಾಗೂ ಸಮಗ್ರ ತನಿಖೆ ನಡೆಸುವಂತೆ ಲೋಕಾಯುಕ್ತರಿಗೆ ವಿನಂತಿಸಲಾಗಿದೆ. ಜೊತೆಗೆ, ತನಿಖೆ ಪೂರ್ಣಗೊಳ್ಳುವವರೆಗೆ ಸಂಬಂಧಿಸಿದ ಕಾಮಗಾರಿಯ ಬಿಲ್‌ಗಳ ಪಾವತಿಯನ್ನು ತಾತ್ಕಾಲಿಕವಾಗಿ ತಡೆಗಟ್ಟುವಂತೆ ಸೂಚನೆ ನೀಡುವಂತೆ ಕೋರಲಾಗಿದೆ. ಈ ಸಂದರ್ಭದಲ್ಲಿ ತಾಜುದ್ದಿನ್, ಅಯ್ಯಪ್ಪ ಮುಚ್ಚಗೇರಿ, ವಾಸುದೇವ, ಶಾಂತು ಮಾಡಗಿರಿ ಸೇರಿದಂತೆ ದಲಿತ ಸೇನೆ ಸದಸ್ಯರು ಉಪಸ್ಥಿತರಿದ್ದರು.

# ಅರ್ಹ ಪಲಾನುಭವಿಗಳಿಗೆ ಗ್ಯಾರಂಟಿ ಯೋಜನೆಗಳು ತಲುಪಿಸಿ ವೆಂಕಟೇಶ್ ಗುತ್ತೇದಾರ

ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರ: ಸರಕಾರ ಜಾರಿಗೆ ತಂದಿರುವ ಪಂಚ ಗ್ಯಾರಂಟಿ ಯೋಜನೆಗಳನ್ನು ಅರ್ಹ ಪಲಾನುಭವಿಗಳಿಗೆ ತಲುಪಿಸಲು ಅಧಿ ಕಾರಿಗಳು ಪ್ರಾಮಾಣಿಕವಾಗಿ ಕಾರ್ಯನಿ ರ್ವಾಹಿಸಿ ಎಂದು ಗ್ಯಾರಂಟಿ ಯೋಜ ನೆಗಳ ಅನುಷ್ಠಾನ ಸಮಿತಿಯ ತಾಲೂಕ ಅಧ್ಯಕ್ಷ ವೆಂಕಟೇಶ್ ಗುತ್ತೇದಾರ ಅಧಿಕಾರಿಗಳಿಗೆ ತಾಕೀತು ಮಾಡಿದರು.**

ಅವರಿಂದು ತಾಲೂಕ ಪಂಚಾಯತ್ ಸಭಾಂಗ ಣದಲ್ಲಿ ನಡೆದ ತಾಲೂಕಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಪ್ರಗತಿ ವರದಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ತಾಲೂಕಿನಲ್ಲಿಯ ಪಡಿತರ ಚೀಟಿದಾರರಿಗೆ ನ್ಯಾಯಬೆಲೆ ಅಂಗಡಿಯವರು ಪ್ರತಿಯೊಬ್ಬರಿಗೆ 2 ಕೆಜಿ ಪಡಿತರ ಧಾನ್ಯಗಳನ್ನು ಕಡಿತ ಮಾಡುತ್ತಿದ್ದಾರೆ ಎಂಬ ಆರೋಪ ಕೇಳಿ ಬಂದಿದೆ. ಗೃಹಲಕ್ಷ್ಮಿ ಯೋಜನೆಯಲ್ಲಿ ತಾಲೂಕಿನಲ್ಲಿ ತಾಂತ್ರಿಕ ದೋಷದಿಂದಾಗಿ 438 ಮಹಿಳಾ ಫಲಾನುಭವಿಗಳ ಖಾತೆಗೆ ಇಲ್ಲಿಯವರಿಗೆ ಹಣ ಜಮೆಯಾಗಿರುವುದಿಲ್ಲ.

ಗೃಹ ಜ್ಯೋತಿ ಯೋಜನೆ, ಶಕ್ತಿ ಯೋಜನೆ



ಯುವನಿಧಿ ಅನ್ನ ಭಾಗ್ಯ ಸೇರಿದಂತೆ ಸರಕಾರ ಜಾರಿಗೆ ತಂದಿರುವ 5 ಗ್ಯಾರಂಟಿ ಯೋಜನೆಗಳನ್ನು ಸಮರ್ಪಕ ವಾಗಿ ಅರ್ಹ ಫಲಾನುಭವಿಗಳಿಗೆ ತಲುಪಿಸುವ ಕೆಲಸವನ್ನು ಅಧಿಕಾರಿಗಳು ಪ್ರಮಾಣಿಕವಾಗಿ ಮಾಡಬೇಕು. ಸರಕಾರದ ಮಹತ್ವಕಾಂಕ್ಷಿ ಯೋಜನೆಗಳಿಂದ ಯಾವುದೇ ಅರ್ಹ ಫಲಾನುಭವಿಗಳು ವಂಚಿತರಾಗಬಾರದು. ಅಧಿ ಕಾರಿಗಳು ಮುತುವರ್ಜಿ ವಹಿಸಿ ಕಾರ್ಯ ನಿರ್ವಹಿಸಬೇಕು ಎಂದು ಹೇಳಿದರು. ನೀರಲಕೇರ ಗ್ರಾಮದಲ್ಲಿ 24 ಕಬ್ಬಿಣದ ಕಂಬಗಳನ್ನು ತೆರವುಗೊಳಿಸಿ ಆರ್ ಸಿ ಸಿ ಕಂಬ ಅಳವಡಿಸಲು ಜೆಸ್ಕಾಂ ಇಲಾಖೆಯ ಅಧಿಕಾರಿಗಳಿಗೆ ಹೇಳಿ 10 ತಿಂಗಳು ಕಳೆದರೂ ಇಲ್ಲಿಯವರೆಗೂ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಆನೆ ಹೊಸೂರು ಗ್ರಾಮದಲ್ಲಿ ಈಗಾಗಲೇ ಸ್ಥಳ ಪರಿಶೀಲನೆ ಮಾಡಲಾಗಿದ್ದು ನೂತನವಾಗಿ ನಿರ್ಮಿಸಲಾಗುತ್ತಿರುವ 33 ಕೆ. ವಿ ಸ್ಟೇಷನ್ ಯಾವುದೇ ಕಾರಣಕ್ಕೂ ಬೇರೆ ಕಡೆಗೆ ಸ್ಥಳಾಂತರಿಸಬಾರದು.

ಹಾಗೂ ಈಚನಾಳ ಕ್ರಾಸ್ ನಲ್ಲಿ ರೈತರ ಜಮೀನೊಂದರಲ್ಲಿ ತುಕ್ಕು ಹಿಡಿದು ಬೀಳುವ ಸ್ಥಿತಿಯಲ್ಲಿ ರುವ ವಿದ್ಯುತ್ ಕಂಬವನ್ನು ತೆರವುಗೊಳಿಸಲು ಜಮೀನಿನ ರೈತರು ಇಲಾಖೆ ಗಮನಕ್ಕೆ ತಂದರೂ ಹಾಗೂ ಈ ವಿಷಯ ಪತ್ರಿಕೆಗಳಲ್ಲಿ ಪ್ರಕಟವಾದರೂ ಸಹ ಇಲ್ಲಿಯವರೆಗೆ ಜೆಸ್ಕಾಂ ಇಲಾಖೆಯ ಅಧಿಕಾರಿಗಳು ಯಾವುದೇ ರೀತಿಯ ಕ್ರಮ ಕೈಗೊಂಡಿರುವುದಿಲ್ಲವೆಂದು ಸದಸ್ಯ ಗದ್ದೆನ ಗೌಡ ಪೊಲೀಸ್ ಪಾಟೀಲ್ ಅವರು ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು . ಬಸ್ ಚಾಲನೆ ಮಾಡಲು ಬಾರದ ನಿರ್ವಾ ಹಕರನ್ನು ಚಾಲನೆ ಮಾಡುತ್ತಾ ಕಾರ್ಯ ನಿರ್ವಹಿಸುವಂತೆ ಸಾರಿಗೆ ಇಲಾಖೆಯ ಅಧಿಕಾರಿಗಳು ನಿರ್ವಾಹಕರಿಗೆ ಒತ್ತಡ ಹಾಕುತ್ತಿರುವುದರಿಂದಾಗಿ ಎಲ್ಲೆಂದರಲ್ಲಿ ಹಳೆಯ ಬಸ್ಸುಗಳು ಹಳ್ಳಕ್ಕೆ ಬೀಳುತ್ತಿದ್ದು ಪ್ರಯಾಣಿಕರಿಗೆ ಏನಾದರೂ ಅನಾಹುತವಾದರೆ ಹೊಣೆ ಯಾರು..?

ಆಹಾರ ಇಲಾಖೆಯಲ್ಲಿ ಹೊಸ ಕಾರ್ಡ್ ವಿತರಿಸಲು 2000 ಹಣ ಪಡೆದು ಕಾರ್ಡು ವಿತರಿಸಲಾಗುತ್ತಿದೆ ಸರಕಾರ ಪಂಚ ಗ್ಯಾರಂಟಿ ಯೋಜನೆಗಳನ್ನು ಜಾರಿ ಗೊಳಿಸಿ ಮೂರು ವರ್ಷ ಗತಿಸುತ್ತಿದ್ದು ತಾಲೂಕಿನಲ್ಲಿ ಇಲ್ಲಿಯವರೆಗೂ ಗ್ಯಾರಂಟಿ ಯೋಜನೆಗಳಿಗೆ ಸಂಬಂಧಪಟ್ಟಂತೆ 19 ಸಭೆಗಳನ್ನು ನಡೆಸಲಾಗಿದೆ ಆದರೂ ಸಹ ಇನ್ನೂ ಸುಧಾರಣೆಯಾಗಿಲ್ಲಾ ಇದಕ್ಕೆ ಅಧಿಕಾರಿಗಳ ಬೇಜವಾಬ್ದಾರಿತನವೇ ಕಾರಣ ಎಂದು ಆರೋಪಿಸಿದರು. ಗ್ಯಾರಂಟಿ ಯೋಜನೆಯ ಅಧ್ಯಕ್ಷ ವೆಂಕಟೇಶ್ ಗುತ್ತೇದಾರ್ ಅವರು ಮುಂ ದಿನ ದಿನಗಳಲ್ಲಿ ಅಧಿಕಾರಿಗಳು ತಪ್ಪು ಮರು ಕಳಿಸದಂತೆ ಈ ರೀತಿಯ ಬೇಜ ವಾಬ್ದಾರಿ ಹಾಗೂ ಕರ್ತವ್ಯದಲ್ಲಿ ನಿರ್ಲಕ್ಷ ತೋರಿಸಬಾರದೆಂದು ತಾಕಿತು ಮಾಡಿದರು.

ಈ ಸಂದರ್ಭದಲ್ಲಿ ತಾಲೂಕ ಯೋಜನಾಧಿಕಾರಿ ಮೈಬೂಬ್ ಸಾಬ್, ಜೆಸ್ಕಾಂ ಇಲಾ ಖೆಯ ಎಇಇ ಬೆನ್ನಪ್ಪ ಕರಿ ಬಂಟನಾಳ, ಸಾರಿಗೆ ವ್ಯವಸ್ಥಾಪಕ ಪ್ರಕಾಶ್ ದೊಡ್ಡ ಮನಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಆಹಾರ ಇಲಾಖೆಯ ಅಧಿ ಕಾರಿಗಳು, ತಾಲೂಕ ಗ್ಯಾರಂಟಿ ಯೋಜನೆಯ ಅನುಷ್ಠಾನ ಸಮಿತಿಯ ಸದಸ್ಯ ಗದ್ದೆನಗೌಡ ಪಾಟೀಲ್, ಮಲ್ಲಣ್ಣ ಗೌಡ, ಗುಂಡಪ್ಪ ಸಾಹುಕಾರ್, ಶಾಂತಾ ಹಣೆಗಿ ಮುದಗಲ್, ಲಿಂಗರಾಜ ಹಟ್ಟಿ, ಶಿವಕುಮಾರ್, ಗೌಡಪ್ಪ ಗೊಲ್ಲಪಲ್ಲಿ, ಅಸ್ಲಾಂ ಪಾಷಾ ಸೇರಿದಂತೆ ಇತರರಿದ್ದರು.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101 KARNATAKA, EDITOR BY: IRFAN K PH NO.